ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ

Chilume Circulated in and around 10 countries

ಸಂಪುಟ ೩, ಸಂಚಿಕೆ ೫, ಅಕ್ಟೋಬರ್ ೨೦೧೫

Find us on: facebook

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ಸಂಪಾದಕೀಯ ... ಪು. ೧

ಸಿಡ್ನಿ ಗಣೇಶ ಹಬ್ಬ ... ಪು. ೨

ಚಿಲುಮೆಯ ಒಳಗೆ

ವಿಚಾರ-ವಿಹಾರ ... ಪು. ೬

ರಾಂ ರಾಮ! ಹಾಸ್ಯ ... ಪು. ೭

ಚಿಲುಮೆಯ ಒಳಗೆ

ಕಥಾಚಿಲುಮೆ, ರೆಸಿಪಿ ಕೊಡ್ತೀರಾ! ... ಪು. ೧೦

ಕಾವ್ಯ ಚಿಲುಮೆ, ಹಾಸ್ಯ ಚಿಲುಮೆ ... ಪು. ೧೧

ಚಿಲುಮೆಯ ಒಳಗೆ

ಪದ ಪುಂಜ/ರಂಗೋಲಿ ... ಪು. ೧೨

ಚಿಲುಮೆಯ ಒಳಗೆ

ವಿಜ್ಞಾನ , ಅಲ್ಲಲ್ಲಿ ಏನೇನು ... ಪು. ೧೪

ಕನ್ನಡದ ಒಂದು ಕಾಯಕಕ್ಕೆ ಮನವಿ

ಪುಟ ೧೫

ಸಂಪಾದಕೀಯ

ಬದರಿ ತ್ಯಾಮಗೊಂಡ್ಲು

ನವರಾತ್ರಿಯ ವೈಭೋಗವನ್ನು ವರ್ಣಿಸಲು ಪದಗಳಿಂದ ಸಾಧ್ಯವಿಲ್ಲ. ನೆನೆದ ಕೂಡಲೇ, ವಿದ್ಯುದಾಲಂಕೃತ ಮೈಸೂರು ಅರಮನೆಯ ಚಿತ್ರವು ಕಣ್ಣಮುಂದೆ ಹಾಗೇ ಬಂದುಬಿಡುತ್ತದೆ. ಜೊತೆಯಲ್ಲಿ ಸೊಬಗಿನ ಜಂಬೂಸವಾರಿಯೂ ಕೂಡ. ಕನ್ನಡನಾಡಿನ ಐಸಿರಿಯನ್ನು ಜನರು ಹೃದಯತುಂಬಿಸಿಕೊಳ್ಳುವಂತೆ ಮಾಡುವ ಆ ಆಚರಣೆಯನ್ನು ನೋಡಿ ಎಂತಹ ಅರಸಿಕನೂ ಕೂಡ "ಈ ಭುವಿಯಲ್ಲಿ ನಾನು ಇನ್ನೂ ಬದುಕಬೇಕು" ಎಂದು ಯೋಚಿಸುವಂತೆ ಮಾಡುತ್ತದೆ. ಪ್ರಪಂಚದೆಲ್ಲೆಡೆಯಿಂದ ಎಲ್ಲರನ್ನೂ ಸೆಳೆವ ಈ ಹಬ್ಬವು, ಬದುಕಿ ಬಾಳಬೇಕೆಂಬ ಅಂಕುರಾರ್ಪಣೆಯನ್ನೂ ನಮ್ಮ ನಮ್ಮ ಮನಸ್ಸಿನಲ್ಲಿ ಮಾಡುತ್ತದೆ.

ನವರಾತ್ರಿಯ ಮತ್ತೊಂದು ವೈಶಿಷ್ಟ್ಯವೆಂದರೆ, ಕಲೆಯ ಆರಾಧನೆ. ಅದೆಷ್ಟು ಜನ ಕಲಾವಿದರು, ಕಲಾರಸಿಕರ ಮನಕ್ಕೆ ತಮ್ಮ ತಮ್ಮ ಕಲಾ ಕೌಶಲ್ಯವನ್ನು ಎರೆಯುತ್ತಾರೆ. ಸಂಗೀತ, ನೃತ್ಯ ಮೊದಲಾದ ಶಿಷ್ಟ ಪ್ರಕಾರಗಳೂ ಸೇರಿದಂತೆ ಕಂಸಾಳೆ, ವೀರಗಾಸೆ ಮುಂತಾದ ಜಾನಪದ ಪ್ರಕಾರಗಳಲ್ಲಿ ಜನರನ್ನು ರಂಜಿಸುವುದರಲ್ಲಿ ನಾ ಮುಂದು ತಾ ಮುಂದು ಎಂದು, ಹರ್ಷೋತ್ಸಾಹದಿಂದ ಭಾಗವಹಿಸುತ್ತಾರೆ. ಇವೆಲ್ಲ ಸಾಧ್ಯವಾಗಬೇಕಾದರೆ ಆ ಕಲಾಕಾರರ ಪರಿಶ್ರಮ ಬಹಳ ಮುಖ್ಯ. ಅದೆಷ್ಟು ಅಭ್ಯಾಸ ಮಾಡಿರಬೇಕು ಅವರುಗಳು. ಅವರುಗಳ ನಿರಂತರ ಅಭ್ಯಾಸದಿಂದ ಮಾತ್ರ ಕಲಾರಸಿಕರಿಗೆ ಕಲೆಯ ಹಬ್ಬದೂಟ ಸಾಧ್ಯ. ಅಂತಹ ಕಲಾರಕ್ಷಕರಿಗೆ ನಮ್ಮ ನಿಮ್ಮೆಲ್ಲರ ನಮನ ಸಲ್ಲಬೇಕು ಮತ್ತು ಅವಕಾಶವಿದ್ದೆಡೆ ಪ್ರೋತ್ಸಾಹಿಸಲೂ ಬೇಕು.

ಅಂತೆಯೇ, ಸಾಹಿತ್ಯವೂ ಕೂಡ. ಹಲವಾರು ಒಳ್ಳೊಳ್ಳೆಯ ಪುಸ್ತಕಗಳು ನಮ್ಮ ನಿಮ್ಮೆಲ್ಲರನ್ನು ಸಾಕಷ್ಟು ಪ್ರಭಾವಿಸಿರುವುದರಲ್ಲಿ ಸಂಶಯವಿಲ್ಲ. ಹಾಗೆಂದು, ಪುಸ್ತಕವನ್ನು ಸರಸ್ವತೀ ಹಬ್ಬದ ದಿನಕ್ಕೆ ಮಾತ್ರ ಪೂಜೆಗಿಟ್ಟರೆ ಅಥವಾ ಹಸ್ತ ಭೂಷಣಕ್ಕಷ್ಟೇ ಸೀಮಿತಗೊಳಿಸಿದರೆ, ಉಪಯೋಗವಿಲ್ಲ. ಹೇಗೆ, ಮೈಸೂರು ದಸರೆಯ ಜಂಬೂಸವಾರಿಯ ವೈಭವಕ್ಕೆ ಕಲಾಕಾರರು ದಿನಂಪ್ರತಿ ಮಾಡುವ ಪರಿಶ್ರಮವಿರುತ್ತದೆಯೋ, ಅಂತೆಯೇ, ಹೆಚ್ಚು ಹೆಚ್ಚು ಪುಸ್ತಕಗಳನ್ನು ಓದುವುದರಿಂದ, ನಮ್ಮನಿಮ್ಮೊಳಗೆ ಅಕ್ಷರಗಳ ತಾಲೀಮು ನಡೆದು, ಅಕ್ಷರಾರ್ಥದ ಜೊತೆಗೆ ನಮ್ಮ ಮನಸ್ಸು ಆ ಪುಸ್ತಕದಲ್ಲಿನ ತತ್ವದಾಳಕ್ಕೂ ಇಳಿದು ಸಾಹಿತ್ಯದ ಅರಮನೆಯನ್ನು ಸೇರಿ ಸನ್ಮಾನಿತವಾಗುತ್ತದೆ.

ಹೊರನಾಡ ಚೆಲುಮೆಯು ಭಾಷೆ ಮತ್ತು ಸಾಹಿತ್ಯಾಸಕ್ತಿಯುಳ್ಳವರ ಅಂಬಾರಿ. ಓದುಗರಾಗಿ ಪತ್ರಿಕೆಯನ್ನು ಓದಿ ಬೆಂಬಲ ಸೂಚಿಸುತ್ತಿದ್ದೀರಿ. ಹಾಗೆಯೇ ಬರಹಗಾರರು ಅವರವರ ಜಾಣ್ಮೆಯ ಕಲಾಪಾಕವನ್ನು ಬಡಿಸುತ್ತಿದ್ದಾರೆ. ನುಡಿಸಿರಿಯ ಈ ಅಂಬಾರಿಯನ್ನು ಮುನ್ನಡೆಸುತ್ತಿರುವ ನಿಮಗೆಲ್ಲರಿಗೂ, ಪತ್ರಿಕೆಯ ಜೊತೆ ನಿಂತು ಪ್ರೋತ್ಸಾಹಿಸುತ್ತಿರುವ ಮಹನೀಯರಿಗೂ ನವರಾತ್ರಿಯ ಶುಭ ಆಶಯಗಳು. ... ▪

ಎರಡು ತಿಂಗಳ ಪ್ರಮುಖ ದಿನಗಳು

ಅಕ್ಟೋಬರ್ ಶ್ರೀ ಮನ್ಮಥ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ/ಭಾದ್ರಪದ ಮಾಸ

01 ಗು - ಸಂಕಷ್ಟ ಚತುರ್ಥಿ 02 ಶು - ಗಾಂಧಿ ಜಯಂತಿ
08 ಗು - ಇಂದಿರಾ ಏಕಾದಶಿ
12 ಸೋ - ಮಹಾಲಯ ಅಮಾವಾಸ್ಯೆ
13 ಮಂ - ನವರಾತ್ರಿ ಆರಂಭ, ಆಶ್ವಯುಜ ಮಾಸ ಆರಂಭ
15 ಗು - ಮುಸ್ಲಿಂ ಹೊಸವರ್ಷ
19 ಸೋ - ಸರಸ್ವತಿ ಪೂಜೆ 21 ಬು - ದುರ್ಗಾಷ್ಟಮಿ
22 ಗು - ಮಹಾನವಮಿ, ಆಯುಧ ಪೂಜೆ
23 ಶು - ವಿಜಯ ದಶಮಿ/ಏಕಾದಶಿ
24 ಶ - ಮೊಹರಂ ಹತ್ತನೇ ದಿನ
27 ಮಂ - ಮಹರ್ಷಿ ವಾಲ್ಮೀಕಿ ಜಯಂತಿ

ನವೆಂಬರ್ ಶ್ರೀ ಮನ್ಮಥ ನಾಮ ಸಂವತ್ಸರ, ದಕ್ಷಿಣಾಯಣ ವರ್ಷ/ಶರದ್ ಋತು, ಅಶ್ವಯುಜ/ಕಾರ್ತೀಕ ಮಾಸ

01 ಭಾ - ಕನ್ನಡ ರಾಜ್ಯೋತ್ಸವ ದಿನ
07 ಶ - ರಮಾ ಏಕಾದಶಿ
10 ಮಂ - ನರಕ ಚತುರ್ದಶಿ
11 ಬು - ದೀಪಾವಳಿ ಅಮಾವಾಸ್ಯೆ
12 ಗು - ಬಲಿಪಾಡ್ಯಮಿ/ಕಾರ್ತೀಕ ಮಾಸ ಆರಂಭ
22 ಭಾ - ಪ್ರಭೋಧಿನಿ ಏಕಾದಶಿ, 23 ಸೋ - ಉತ್ಥಾನ ದ್ವಾದಶಿ
25 ಬು - ಗುರು ನಾನಕ್ ಜನ್ಮದಿನ, ಹುಣ್ಣಿಮೆ
26 ಗು - ಹುತ್ತರಿ ಹಬ್ಬ
28 ಶ - ಕನಕದಾಸರ ಜಯಂತಿ
29 ಭಾ - ಸಂಕಷ್ಟ ಚತುರ್ಥಿ

ಭಾರತೀಯರೆಲ್ಲ ಸೇರಿ ಆಚರಿಸುವ ಹಬ್ಬಗಳಲ್ಲಿ ಒಂದು ಗಣೇಶನ ಹಬ್ಬ. ಮಾವಿನ ಸೊಪ್ಪು, ಬಾಳೇಕಂಬ, ಕಬ್ಬಿನಜಲ್ಲೆ, ಕರಿಗಡುಬು, ಕಡಲೇಕಾಳು ಉಸ್ಲಿ, ಇವೆಲ್ಲಾ ಹೊರದೇಶಕ್ಕೆ ಬಂದಮೇಲೆ ಕೈಗೆಟುಕದ ವಸ್ತು ಅಂತ ನೀವು ಭಾವಿಸಿದ್ದರೆ ಅದು ಸುಳ್ಳೇ ಸರಿ. ಸಿಡ್ನಿಯ ಲಿವರ್ಪೂಲ್ ಬಡಾವಣೆಯಲ್ಲಿ ಕಳೆದ ಇಪ್ಪತ್ತು ವರ್ಷಗಳಿಂದ ಆಚರಿಸಿಕೊಂಡು ಬರುತ್ತಿರುವ ಗಣೇಶೋತ್ಸವ ನೋಡಿ ಅನುಭವಿಸಿದವರೇ ಬಲ್ಲರು ಅದರ ಸವಿ, ಸಂಭ್ರಮ. ಸುಮಾರು ನೂರು ಜರ ಸೇರಿ ಆರಂಭಿಸಿದ ಅಂದಿನ ಗಣಪತಿ ಹಬ್ಬ ಇಂದು ಮೂರು ಸಾವಿರ ಜನ ಸೇರಿ ಆಚರಿಸುವ ಮಟ್ಟಿಗೆ ಬೆಳೆದಿದೆ ನಮ್ಮ ಲಿವರ್ಪೂಲ್ ಗಣೇಶನ ಹಬ್ಬ. ಹುಬ್ಬಳ್ಳಿ ಗಣೇಶ, ಅರಸೀಕೆರೆ ಗಣೇಶ ಅನ್ನೋ ಹಾಗೆ ಈಗ ಲಿವರ್ಪೂಲ್ ಗಣೇಶ ಕೂಡಾ ವಿಶ್ವ ವಿಖ್ಯಾತ ಅಂದರೆ ತಪ್ಪಿಲ್ಲ.

ಶುಕ್ರವಾರ ಚಪ್ಪರ ಹಾಕುವುದರಿಂದ ಹಿಡಿದು ಭಾನುವಾರ ಸಂಜೆ ವಿಸರ್ಜನೆವರೆಗೂ ಕಾಲ ಕಳೆದದ್ದೂ ಗೊತ್ತಿಲ್ಲ, ಸಭಾಂಗಣದಲ್ಲಿ ಓಡಾಡಿ ಕಾಲು ಪದ ಹೇಳ್ತಿದ್ದೂ ಗೊತ್ತಿಲ್ಲ. ಶುಕ್ರವಾರ ಸಂಜೆ ಪೂಜೆ ನಡೆಯುವ ವೇದಿಕೆಗೆ ಅಲಂಕಾರ ಮುಗಿಯುತ್ತಲೇ ಆರೂವರೆ ಅಡಿ ಎತ್ತರದ ಗಣಪತಿ ಬಂದು ಕುಳಿತ, ಮುಂದಿನ ದಿನದ ಮೂರು ಸಾವಿರ ಜನಕ್ಕೆ ಅಡುಗೆ ತಯಾರಿಗಾಗಿ ತರಕಾರಿ ಹೆಚ್ಚುವ ಕೆಲಸ ನಿರಂತರ ಆಗುತ್ತಿದ್ದಂತೆ, ಬಾಗಿಲಿಗೆ ತೋರಣ ಬಹುದೊಡ್ಡ ರಂಗೋಲೆ ಸಿಂಗಾರ ಸಜ್ಜಾಯಿತು.

ಮರುದಿನ ಮುಂಜಾನೆ ಅಂದರೆ ಶನಿವಾರ ಗಣಪತಿ ಪ್ರತಿಷ್ಠಾಪನೆ, ಹೋಮ, ಮಕ್ಕಳಿಂದ ಸಾಮೂಹಿಕ ಪೂಜೆ ನೋಡಲೆರೆಡು ಕಣ್ಣು ಸಾಲದ ದೃಶ್ಯ. ಚಿಣ್ಣರಿಗೆ ಚಿತ್ರಕಲೆ, ಬಣ್ಣ ಬಳಿಯುವ ಸ್ಪರ್ಧೆಯು ತುಂಬಾ ಮಕ್ಕಳನ್ನು ಆಕರ್ಷಿಸಿತು. ಪೂಜಾನಂತರ ಭೋಜನ, ಅದಾದ ನಂತರ ಸಂಜೆ ಶಾಸ್ತ್ರೀಯ ಸಂಗೀತ ಮತ್ತು ಸಾಂಸೃತಿಕ ನೃತ್ಯ/ಕುಣಿತ ಮುಂಬೈಯಿನ ನೆನಪು ತರುವಂತಿತ್ತು. ಆರ್ಟ್ ಆಫ್ ಲಿವಿಂಗ್ ಅವರು ನಡೆಸಿಕೊಟ್ಟ ಯೋಗ ಪ್ರದರ್ಶನ, ಸಂಸ್ಕೃತ ಶಾಲೆಯ ಶ್ಲೋಕ ಸಂಯೋಜಿತ ನೃತ್ಯ ಈ ವರ್ಷದ ವಿಶೇಷ. ಅದು ಬಿಟ್ಟು ಉಳಿದವು ಬಾಲಿವುಡ್ ಅಲ್ಲ ಅಂದರೂ ರೀಮಿಕ್ಸ್ ಹಾಡುಗಳಿಗೆ ಫಿಲ್ಮೀ ಸ್ಟೈಲ್ ನಲ್ಲಿ ಕುಣಿದಾಟ. ಭರತನಾಟ್ಯ ಅನ್ನಿಸಿಕೊಂಡದ್ದು ಒಂದೋ ಎರಡೊ ನೃತ್ಯ ನೋಡುಗರ ಕಣ್ಮನ ತಣಿಸಿತು. ಅದು ಮುಗಿಯುತ್ತಿದ್ದಂತೆ ಸಾಲುಸಾಲಿನಲ್ಲಿ ಮೂರು ಸಾವಿರ ಜನ ಸಾಗಿ ಕೇವಲ ಒಂದೂವರೆ ತಾಸಿನಲ್ಲಿ ಊಟ ಮುಗಿಸಿ ಮನೆಗೆ ತೆರಳಿದ್ದು ಒಂದು ದಾಖಲೆಯೇ ಎನ್ನಬಹುದು.

ಭಾನುವಾರ ಬೆಳಗ್ಗೆ ಎಂಟಕ್ಕೇ ಸತ್ಯನಾರಾಯಣ ಪೂಜೆ, ಮಕ್ಕಳಿಂದ ವೇಷಭೂಷಣ ಸ್ಪರ್ಧೆ, ದಾಂಡಿಯಾ ಕುಣಿತ, ಊಟ ಎಲ್ಲವೂ ಮಧ್ಯಾಹ್ನ ಒಂದರ ಹೊತ್ತಿಗೆ ಮುಗಿಯಿತು ಎನ್ನುವಷ್ಟರಲ್ಲಿ ಮತ್ತೊಂದು ಸಂಭ್ರಮ ಎಲ್ಲರ ಗಮನ ಸೆಳೆಯಿತು. ಅದೇ ಗಣೇಶನ ಮೆರವಣಿಗೆ. ಹದಿನೈದು ಅಡಿ ಎತ್ತರದ ರಥ ಅದರ ಅಲಂಕಾರ ಮಾಡುವ ಪುಣ್ಯ ನಮ್ಮ ತಂಡದವರದಾಗಿತ್ತು. ಲಿವರ್ಪೂಲ್ ನ ಎರಡು ರಸ್ತೆಗಳಲ್ಲಿ ಸುಮಾರು ಆರುನೂರು ಜನ ಕೂಡಿ ಮಹಾರಾಷ್ಟ್ರದ ಶಿವಫರ್ಜನೆ ಎಂಬ ಡೋಲು ನಗಾರೆಗಳ ಅಬ್ಬರದ ಸದ್ದು, ಕಂಸಾಳೆಯಂತೆ ತೋರುವ ಹೆಂಗಸರ ಕುಣಿತ, ಗಣಪತಿ ಬಪ್ಪ ಘೋಷ, ಕೇಸರಿ ಬಾವುಟ ಹಿಡಿದು ಕುಣಿಯುತ್ತಿದ್ದ ಯುವಕರು, ಎಲ್ಲವೂ ಒಂದು ಕ್ಷಣ ನಾವು ಎಲ್ಲಿದ್ದೇವೆ ಅನ್ನುವಂತೆ ಅಚ್ಚರಿ ಮೂಡಿಸಿತು. ಸ್ಥಳೀಯ ಕೌನ್ಸಿಲರ್ ಮತ್ತು ಪಾರ್ಲಿಮೆಂಟ್ ಸದಸ್ಯರೂ ಜೊತೆಗೂಡಿ ಸಂತಸದಿ ರಸ್ತೆಗಳಲ್ಲಿ ಕುಣಿದದ್ದು ನೋಡಲು ಸಂತಸ ತಂದಿತು. ವಿಸರ್ಜನೆಯು ಹತ್ತಿರದ ಜಾರ್ಜಸ್ ನದಿಯಲ್ಲಿ ಜರುಗಿತು. ಗಣೇಶನನ್ನು ನೀರಿನಲ್ಲಿ ಮುಳುಗಿಸಿದಾಗ ಮಕ್ಕಳ ಮುಖದಲ್ಲಿ ಮರುಕ ಮೂಡಿತ್ತು. ಮುಂದಿನ ವರ್ಷ ಮತ್ತೆ ಬರುತ್ತಾನೆ ಎಂಬ ಭರವಸೆಯಿಂದ ಒಲ್ಲದ ಮನಸ್ಸಿನಲ್ಲಿ ಮನೆ ಸೇರಿದೆವು. ಸಂಸೃತಿ, ಶಾಂತಿ, ಒಗ್ಗಟ್ಟು ಪ್ರತಿಬಿಂಬಿಸುವ ಈ ಗಣಪತಿ ಹಬ್ಬಕ್ಕೆ ಮುಡುಪಿಟ್ಟ ನೂರಾರು ಜನರ ನೂರಾರು ದಿನದ ಪರಿಶ್ರಮ ಸಾರ್ಥಕ ಎನಿಸಿತು. ▪

ಮತ್ತಷ್ಟು ವೈವಿಧ್ಯಮಯ ಚಿತ್ರಗಳಿಗೆ ಮುಂದಿನ ಪುಟ ನೋಡಿ

AKASH PACIFIC CUISINE

FRIENDS OF INDIA SYDNEY

ಸಿಡ್ನಿಯಲ್ಲಿ ನಾಲ್ಕೈದು ದಶಕಗಳ ಹಿಂದೆಯೇ ಕನ್ನಡಿಗರು ಬಂದು ನೆಲೆಸಿರುವ ವಿಷಯ ಸ್ಥಳೀಯರಿಗೆ ತಿಳಿದ ಮಾತು. ಮಹಲುಗಳಲ್ಲಿ ಮೊದಮೊದಲು ಕರಿತಲೆಗಳನ್ನು ಕಂಡರೆ ಸಾಕು ತಾವು ಭಾರತೀಯರೇ? ಎಂದು ಪರಿಚಯ ಮಾಡಿಕೊಂಡು ಉಭಯ ಕುಶಲೋಪರಿ ವಿಚಾರಿಸಿ ಮನೆ ಸೇರುತ್ತಿದ್ದ ಕಾಲ ಒಂದಿತ್ತು. ಹೊರರಾಜ್ಯ ಅಥವಾ ಹೊರದೇಶಗಳಿಗೆ ಹೋಗಿ ನೆಲೆಸುವ ಹವ್ಯಾಸ ಕನ್ನಡಿಗರಲ್ಲಿ ಸ್ವಲ್ಪ ಕಡಿಮೆಯೇ ಎನ್ನಬಹುದು, ಪಕ್ಕದ ರಾಜ್ಯದವರಿಗೆ ಹೋಲಿಸಿದರೆ. ಮುಂದೆ ಉದ್ಯೋಗ/ಅನಿವಾರ್ಯ ಪರಿಸ್ಥಿತಿ/ ಉಜ್ವಲ ಭವಿಷ್ಯ/ಉತ್ತಮ ಜೀವನ ಗುಣಮಟ್ಟ ಇನ್ನೂ ಅನೇಕ ಕಾರಣ ಹೊತ್ತು ಬರಬರುತ್ತಾ ಭಾರತದಿಂದ ವಲಸೆ ಬರುವವರಲ್ಲಿ ಕನ್ನಡಿಗರೂ ತಕ್ಕಮಟ್ಟಿಗೆ ಕಾಣುತ್ತಾ ಬಂದರು. ಕನ್ನಡದವರಲ್ಲಿ ವೈದ್ಯರು, ಇಂಜಿನಿಯರ್, ಶಿಕ್ಷಕ ವರ್ಗದಲ್ಲಿ ವಲಸೆ ಶುರುವಾಗಿ ನಂತರ ತಾಂತ್ರಿಕ ತರಬೇತಿ ಪಡೆದವರು, ಬ್ಯಾಂಕ್ ಉದ್ಯಮಿಗಳು ಹೆಚ್ಚು ಹೆಚ್ಚು ಕಂಡರು. ಮೊದಲು ತಾತ್ಕಾಲಿಕ ಎರಡು ಮೂರು ನಾಲ್ಕು ವರ್ಷ ಇಲ್ಲಿ ಇದ್ದು ಸ್ವಲ್ಪ ಹಣ ಗಳಿಸಿ ಮರಳಿ ತಾಯ್ನಾಡು ಸೇರುವ ಎಂದು ಸಂಕಲ್ಪ ಮಾಡಿ ಮನೆ ಕಟ್ಟಿ ಬಂಡವಾಳ ಹೂಡಿ ಅಲ್ಲಿಗೆ ಹೋಗುವ ಆಸೆ ಬಹುತೇಕ ಮಂದಿಯಲ್ಲಿ ದೂರ ಸರಿದಿದೆ. ಹಾಗೆ ಹೋದವರು ಬೆರಳೆಣಿಕೆಯಷ್ಟು ಮಾತ್ರ. ಅದರಲ್ಲೂ ವಾಪಸ್ ಆಸ್ಟ್ರೇಲಿಯಾಕ್ಕೆ ತಿರುಗಿ ಬಂದ ಉದಾಹರಣೆಗಳೂ ಇವೆ. ಇಲ್ಲೂ ಇರದೆ ಅಲ್ಲೂ ಹೋಗದೆ ದ್ವಂದ್ವಕ್ಕೆ ಸಿಲುಕಿ ಕೊರಗುತ್ತಿರುವವರಿಗೇನೂ ಕಡಿಮೆ ಇಲ್ಲ.

ಹೊರ ದೇಶಕ್ಕೆ ಬಂದಾಗ ನಮ್ಮ ಹಬ್ಬ, ಆಚರಣೆ, ಸಂಸ್ಕೃತಿ, ಉತ್ಸವ, ದೈವಭಕ್ತಿ, ಎಲ್ಲವೂ ಸ್ವಲ್ಪ ಅತಿಯಾಗೇ ಬೆಳೆಯುತ್ತಿರುವುದು ಸಾಕ್ಷಾತ್ಕಾರವಾಗಿದೆಯಾದರೂ ಭಾಷೆಯ ಮೇಲೆ ಅಭಿಮಾನ ಬೆಳೆದಿರುವುದು ಅಷ್ಟಕ್ಕಷ್ಟೆ. ಅದಿರಲಿ ನಮ್ಮೂರಿನಲ್ಲೇ ಜಮೀನುಕೊಂಡು, ಮನೆಗಳನ್ನು ಕಟ್ಟಿ, ವಿಮಾನದಲ್ಲಿ ಪದೇ ಪದೇ ನೇರ ಬೆಂಗಳೂರಿಗೇ ಹೋಗಿ ಇಳಿದು, ಅಲ್ಲೇ ಬಗೆಬಗೆ ತಿಂಡಿ ತಿಂದು, ನೀರು/ಬೀರು ಕುಡಿದು ತೇಗಿ ಬರುತ್ತಿದ್ದರೂ ಕನ್ನಡ ಮಾತ್ರ ಕಲಿಯದೆ ಮಕ್ಕಳಿಗೂ ಕಲಿಸದ ಜನ "ಸೋ ಕಾಲ್ಡ್" ಬೆಂಗಳೂರಲ್ಲೇ ಹುಟ್ಟಿಬೆಳೆದ ಕನ್ನಡೇತರರು ಅಂದರೆ ತಮಿಳು, ತೆಲುಗರು, ಮಳೆಯಾಳಿಗಳು ಎಂದು ಕರೆದುಕೊಳ್ಳುವ ಕನ್ನಡಿಗರು.

ಹೀಗಿರುವಾಗ ನಲವತ್ತು ವರ್ಷಗಳ ಹಿಂದೆ ಅಲ್ಲೋ ಇಲ್ಲೋ ಸೇರಿ ಮನೆ ಮಟ್ಟಿಗೆ ಹಬ್ಬ, ಔತಣ ಮಾಡುವುದರೊಂದಿಗೆ ನಾಂದಿಯಾಗಿ ಕ್ರಿಕೆಟ್ ತಂಡ, ಕನ್ನಡ ಸಂಘ, ರಾಘವೇಂದ್ರ ಭಕ್ತಿ ಮಂಡಳಿ, ಬಸವ ಸಮಿತಿ ಹೀಗೇ ಬೆಳೆಯುತ್ತಾ ಬಂದು ಜನರಿಗೆ ತಂತಮ್ಮ ಅಭಿರುಚಿಗೆ ತಕ್ಕ ಹಾಗೆ ಔತಣಕ್ಕೆ ಸೇರುವ ಸಂಘ-ಸಂಸ್ಥೆ ಗಳು ಹುಟ್ಟಿದವು.

ಇನ್ನು ಕನ್ನಡಿಗರೇ ಸಂಘದ ಸಮಿತಿಯಲ್ಲಿ ಹೆಚ್ಚಾಗಿರುವ ಗಣೇಶೋತ್ಸವ ಸಿಡ್ನಿ ಮತ್ತು ಮೆಲ್ಬೌರ್ನ್ ನಲ್ಲಿ ಎಲ್ಲ ಭಾರತೀಯರನ್ನು ಸಾವಿರಾರು ಸಂಖ್ಯೆಯಲ್ಲಿ ಸೇರಿಸುವಲ್ಲಿ ಸೈ ಎನಿಸಿದೆ. ಗಣಪತಿ ಹಬ್ಬದ ಆಚರಣೆ ಮುಂದಿನ ವರ್ಷ ಇಪ್ಪತ್ತೊಂದನೇ ವಾರ್ಷಿಕೋತ್ಸವ ಆಗಲಿದೆ. ಅಲ್ಲಿ ಕನ್ನಡಿಗರದೇ ಮೇಲುಗೈ ಎನ್ನುವುದು ಹೆಮ್ಮೆಯಲ್ಲವೇ?

ಇದೇ ಹತ್ತು ವರ್ಷದ ಹಿಂದೆ ಆರಂಭಗೊಂಡು ಹೊಸ ಅಲೆಯನ್ನೇ ಎಬ್ಬಿಸಿದ ಮೆಚ್ಚುಗೆ ಸುಗಮ ಕನ್ನಡ ಕೂಟಕ್ಕೆ ಸೇರುತ್ತದೆ. ಯುವ ಕನ್ನಡಿಗರ ನವ ಅಭಿರುಚಿಗಳನ್ನು ಅರಿತು ಕಳೆದ ಹತ್ತು ವರ್ಷಗಳಿಂದ ಸ್ಥಳೀಯ ಕನ್ನಡಿಗರನ್ನು ಒಟ್ಟುಗೂಡಿಸಿ ವಿಭಿನ್ನ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬರುತ್ತಿರುವ ನಮ್ಮ ಸುಗಮ ಕನ್ನಡ ಕೂಟದ ಸದಸ್ಯರಾದ ಕನ್ನಡ ಬಂಧುಮಿತ್ರರು ವರ್ಷಕ್ಕೊಮ್ಮೆ ಬರೇ ರಾಜ್ಯೋತ್ಸವವನ್ನು ಮಾತ್ರ ಆಚರಿಸಿಕೊಂಡು ವರ್ಷಕ್ಕೊಮ್ಮೆ ಬಾವುಟ ಹಾರಿಸಿಕೊಂಡು ಬರದೇ ನಿರಂತರವಾಗಿ ಯುಗಾದಿ, ವಾರಂತ್ಯದ ಮೂರು ಕನ್ನಡ ಶಾಲೆಗಳು, ಕನ್ನಡದವರಿಂದ ಉಚಿತ ಅಡುಗೆ ಮತ್ತು ಆರೋಗ್ಯ ಸಲಹೆ ಕಾರ್ಯಕ್ರಮಗಳು, ನೂರಾರು ಗಾಯಕರಿಗೆ ವೇದಿಕೆ ನೀಡಲು ಸುಗಮ (ಕ್ಯಾರೆಯೋಕೆ) ಗಾನ ಸಮಾಜ, ಸಾಹಿತ್ಯಾಸಕ್ತರಿಗೆ ಪ್ರಪಂಚದೆಲ್ಲೆಡೆ ಪ್ರಚಾರದಲ್ಲಿರುವ "ಹೊರನಾಡ ಚೆಲುಮೆ" ಇ-ಮಾಸಪತ್ರಿಕೆ, ಕನ್ನಡ ಚರ್ಚಾ ಕೂಟಗಳು, ನಾಟಕ, ಮಕ್ಕಳಿಗೆ ಸಾಹಸ ಹಾಗೂ ಕಲೆಗಳ ವರ್ಕ್ ಶಾಪ್, ಯೋಗಾಭ್ಯಾಸ, ಗತರಾದ ಗಣ್ಯರಿಗೆ ಶ್ರದ್ಧಾಂಜಲಿ, ಕನಕ - ಪುರಂದರ ನಮನ, ಸಿನಿಮಾ ಪ್ರದರ್ಶನ ಇನ್ನೂ ಅನೇಕ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದೆ.

ಪ್ರಸ್ತುತ ಹತ್ತನೇ ವಾರ್ಷಿಕೋತ್ಸವದ ಅಂಗವಾಗಿ ನಡೆಸಲು ಉದ್ದೇಶಿಸಲಾಗಿರುವ ದಸರಾ ಮತ್ತು ರಾಜ್ಯೋತ್ಸವ ಕಾರ್ಯಕ್ರಮದ ಅಂಗವಾಗಿ ನಾಟಕೋತ್ಸವ, ಕನ್ನಡ ಸಾಹಿತ್ಯ ಸಂಗಮ, ಸಿನಿಮಾ ಪ್ರದರ್ಶನ ಯೋಜಿಸಲಾಗಿದೆ. ಎಲ್ಲರೂ ಹೆಚ್ಚಿನ ಸಂಖೆಯಲ್ಲಿ ಬಂದು ಕೈಗೂಡಿಸಿ ಕನ್ನಡದ ಕೆಲಸಕ್ಕೆ ಸೈ ಎನ್ನುವ ಹಾಗೆ ಯಶಸ್ವಿಗೊಳಿಸೋಣ. ಸಾಗರದಾಚೆಯ ನಾಡಿನಲ್ಲೂ ಕನ್ನಡ ಕಂಪನ್ನು ಸಾರೋಣ ಬನ್ನಿ...

ಕನ್ನಡಕ್ಕೆ ನಾನೇನು ಮಾಡಬಹುದು ಎಂದು ಇಂದೇ ಯೋಚಿಸಿ ... ನಾಳೆ ಎಂದರೆ ಅದಾಗದು ▪

ಸುಗಮಕನ್ನಡ ಕೂಟದ ಪರವಾಗಿ ಒಂದು ಬಿನ್ನಹ

ಆತ್ಮೀಯ ಕನ್ನಡ ಬಂಧುಮಿತ್ರರೇ,

ಕಾಲ ತಡೆಯಲು ಆಗದ ಮಾತು, ನೆನೆಸಿಕೊಂಡರೆ ಸರಿಯಾಗಿ ಬಳಸದೇ ಅದೆಷ್ಟು ಕಳೆದಿದ್ದೇವೆ ಅನ್ನಿಸಿತು. ಉಳಿದದ್ದಾದರೂ ಮೀರಿ ಹೋಗುವುದರೊಳಗೆ ಕಿಂಚಿತ್ತು ಕನ್ನಡ ಕಾಯಕ ಏನಾದರು ಮಾಡುವ ಆಸೆ. ಈ ಬಯಕೆಯನ್ನು ಹೊತ್ತು ಕೆಲಸ ಮತ್ತು ಸಂಸಾರಕ್ಕೆ ಸಮಯವಿತ್ತು, ಮಿಕ್ಕಿದ್ದನ್ನು ಮುಡುಪಿಟ್ಟು ನೆಟ್ಟ ಬೀಜ ಇಂದಿಗೆ ಹತ್ತು ವರ್ಷ ತುಂಬಿದೆ, ಈಗ ಬೆಳೆದು ಬಂದು ಇಲ್ಲಿಗೆ ನಿಂತಿದೆ, ಸುಗಮಕನ್ನಡ ಕೂಟ. ಈ ಪಯಣದಲ್ಲಿ ಹೆಗಲುಕೊಟ್ಟವರಿಗೆ ಹಾಗೂ ಇನ್ನೂ ಜೊತೆಗೂಡಿ ನಿಸ್ವಾರ್ಥದಿಂದ ಕೈಹಿಡಿದು ನಡೆಸುತ್ತಿರುವ ಸಜ್ಜನರಿಗೆ ಋಣಿಗಳು ನಾವು.

ಕಳೆದ ಹತ್ತು ವರ್ಷಗಳಿಂದ ಸ್ಥಳೀಯ ಕನ್ನಡಿಗರನ್ನು ಒಟ್ಟುಗೂಡಿಸಿ ವಿಭಿನ್ನ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬರುತ್ತಿರುವ ನಮ್ಮ ಸುಗಮ ಕನ್ನಡ ಕೂಟದ ಸದಸ್ಯರಾದ ಕನ್ನಡ ಬಂಧುಮಿತ್ರರು ವರ್ಷಕ್ಕೊಮ್ಮೆ ಬರೇ ರಾಜ್ಯೋತ್ಸವವನ್ನು ಮಾತ್ರ ಆಚರಿಸಿಕೊಂಡು ಬರದೇ ನಿರಂತರವಾಗಿ ಯುಗಾದಿ, ವಾರಂತ್ಯದ ಮೂರು ಕನ್ನಡ ಶಾಲೆಗಳು, ಕನ್ನಡದವರಿಂದ ಉಚಿತ ಅಡುಗೆ ಮತ್ತು ಆರೋಗ್ಯ ಸಲಹೆ ಕಾರ್ಯಕ್ರಮಗಳು, ನೂರಾರು ಗಾಯಕರಿಗೆ ವೇದಿಕೆ ನೀಡಲು ಸುಗಮ (ಕ್ಯಾರೆಯೋಕೆ) ಗಾನ ಸಮಾಜ, ಸಾಹಿತ್ಯಾಸಕ್ತರಿಗೆ ಪ್ರಪಂಚದೆಲ್ಲೆಡೆ ಪ್ರಚಾರದಲ್ಲಿರುವ "ಹೊರನಾಡ ಚಿಲುಮೆ" ಇ-ಮಾಸಪತ್ರಿಕೆ, ಕನ್ನಡ ಚರ್ಚಾ ಕೂಟಗಳು, ನಾಟಕ, ಮಕ್ಕಳಿಗೆ ಸಾಹಸ ಹಾಗೂ ಕಲೆಗಳ ವರ್ಕ್ ಶಾಪ್, ಯೋಗಾಭ್ಯಾಸ, ಗತರಾದ ಗಣ್ಯರಿಗೆ ಶ್ರದ್ಧಾಂಜಲಿ, ಕನಕ - ಪುರಂದರ ನಮನ, ಸಿನಿಮಾ ಪ್ರದರ್ಶನ ಇನ್ನೂ ಅನೇಕ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದೆ.

ಪ್ರಸ್ತುತ ಹತ್ತನೇ ವಾರ್ಷಿಕೋತ್ಸವದ ಅಂಗವಾಗಿ ಆಯೋಜಿಸಲಿರುವ ದಸರಾ ಮತ್ತು ರಾಜ್ಯೋತ್ಸವ ಕಾರ್ಯಕ್ರಮಕ್ಕೆ ತಮ್ಮ ಶುಭ ಹಾರೈಕೆಯನ್ನು ಇದೇ ಸಂದರ್ಭದಲ್ಲಿ ಬಿಡುಗಡೆಯಾಗಲಿರುವ ಸ್ಮರಣ ಸಂಚಿಕೆಯಲ್ಲಿ ತಮ್ಮ ಹಾರೈಕೆಯು ಅಚ್ಚಾಗಲಿದೆ. ಈ ಜಾಹಿರಾತಿನಿಂದ ಬಂದ ಹಣ ಈ ದಿನದ ಕಾರ್ಯಕ್ರಮಕ್ಕೆ ಸದುಪಯೋಗ ಮಾಡಿಕೊಳ್ಳಲಗುವುದು.

ಇಂತಿ ಸುಗಮಕನ್ನಡ ಕೂಟದ ಪರವಾಗಿ

- ಕನಕಾಪುರ ನಾರಾಯಣ (Contact : sydneykannadaschool@gmail.com)

Dear Friends,

Sugamakannada koota has been actively organising variety of functions since last ten years. Hope they were useful for Kannada community. It could be entertainment or educational or even providing stage for many talented artists. Looking at the future we still need to do more.

On this 10th year celebration we have planned to print a souvenir with few articles, details on our activities, photographic memories of previous programs organised. You can help by providing an advertisement or wish to our organisation. The cost is comparatively very low. The money raised by this will be used for the 10th year anniversary day on 7th November.

Business - $150.00
Non-profit organisations - $100
Individual family - $50

Colour pages are limited, will be offered on first come first serve basis. Please contact before October 25th to place your advertisement

Thanking you on behalf of Sugamakannada Koota

-Kanakapur Narayana

Contact: sydneykannadaschool@gmail.com

ವಿಚಾರ ವಿಹಾರ

ಮಾಲು, ಅಡಿಲೈಡ್

ಒಳ್ಳೆಯ ವಿದ್ಯೆ

ಇದು ಒಂದು 'ವಿಚಾರ ರಶ್ಮಿಯ' ಕಥೆ

ಒಂದು ಗುರುಕುಲ. ಅಲ್ಲಿ ಒಬ್ಬ ಶ್ರೇಷ್ಠ ಗುರುಗಳಿದ್ದರು.
ಆ ಗುರುವಿಗೆ ಅನೇಕ ಶಿಷ್ಯರಿದ್ದರು. ತಮ್ಮಲ್ಲಿ ಇದ್ದ ಎಲ್ಲ ವಿದ್ಯೆಗಳನ್ನು ಶಿಷ್ಯರಿಗೆ ಧಾರೆ ಎರೆದು,
ನಿಜ ಜೀವನದ ರಂಗಕ್ಕೆ ಈ ಗುರುವು ವಿದ್ಯೆಯನ್ನು ಕಲಿತ ಶಿಷ್ಯರನ್ನು ಬೀಳ್ಕೊಡುತ್ತಿದ್ದರು.

ಒಂದು ದಿನ ಗುರುಕುಲ ವಾಸ ಮುಗಿಸಿದ ಕೆಲವು ಶಿಷ್ಯರುಗಳು ತಮ್ಮ ತಮ್ಮ ಊರುಗಳಿಗೆ ಹಿಂತಿರುಗಲು ಅನುವಾದರು.

'ಇಷ್ಟು ವರ್ಷಗಳು ಇಲ್ಲಿ ಇದ್ದು ಇವರುಗಳು ಏನು ಕಲಿತಿದ್ದಾರೋ ನೋಡೋಣ' ಎಂದು ಗುರುವು ಒಂದು ಸಣ್ಣ ಪರೀಕ್ಷೆ ಏರ್ಪಡಿಸಿದ್ದರು.

ಅದೊಂದು ವಿಚಿತ್ರ ಪರೀಕ್ಷೆ. ಶಿಷ್ಯರು ಊರಿಗೆ ಹೋಗುವ ದಾರಿಯಲ್ಲಿ ಗಾಜಿನ ಚೂರುಗಳನ್ನು ಎರಚಿಬಿಟ್ಟರು. ಇವರಲ್ಲಿ ಯಾರು ಯಾರು ಏನು ಏನು ಮಾಡುತ್ತಾರೋ ನೋಡೋಣವೆಂದು ಮರೆಯಲ್ಲಿ ನಿಂತರು.

ಹಲವರು ಗಾಜಿನ ಚೂರುಗಳನ್ನು ದಾಟಿಕೊಂಡು ಹೋದರು. ಕೆಲವರು ಅದನ್ನು ತುಳಿಯದ ಹಾಗೆ ಬಳಸಿಕೊಂಡು ಹೋದರು. ಇನ್ನು ಕೆಲವರು ಅಲ್ಲೇ ನಿಂತು, ಬಿದ್ದಿದ್ದ ಗಾಜಿನ ಚೂರುಗಳನ್ನು ಆಯ್ದು, ಅವನ್ನು ರಸ್ತೆಯಿಂದ ತೆಗೆದು ಹಾಕಿದರು.

'ನೀವು ಕಲಿತಿರುವುದು ಇನ್ನೂ ಸಾಲದು ಇಲ್ಲಿ ಬನ್ನಿ' ಎಂದು ಗುರುವು ಮೊದಲ ಎರಡು ಗುಂಪಿನವರನ್ನು ಹಿಂದಕ್ಕೆ ಕರೆದರು.

'ನೀವುಗಳು ಕಲಿತದ್ದು ಸಾರ್ಥಕವಾಯಿತು, ಹೋಗಿಬನ್ನಿ. ದೇವರು ನಿಮಗೆ ಒಳ್ಳೆಯದನ್ನು ಮಾಡಲಿ' ಎಂದು ಆ ಗಾಜಿನ ಚೂರುಗಳನ್ನು ತೆಗೆದು ಹಾಕಿದ ಆ ಮೂರನೇ ಗುಂಪಿನ ಶಿಷ್ಯರನ್ನು ಹೃದಯಪೂರ್ವಕವಾಗಿ ಆಶೀರ್ವದಿಸಿ ಕಳಿಸಿ ಕೊಟ್ಟರು.

'ಇದರಿಂದ ಇನ್ನೊಬ್ಬರಿಗೆ ತೊಂದರೆ ಆಗುತ್ತದೆ, ಇದನ್ನು ನಿವಾರಿಸಬೇಕು' ಎಂಬ ಬುದ್ಧಿಗೆ 'ಸದ್ವಿದ್ಯೆ' ಎನ್ನುತ್ತಾರೆ.

'ಯಾರಿಗೆ ಏನಾದರೆ ಏನು? ನನಗೇನು ಆಗದಿದ್ದರೆ ಸಾಕು' ಎನ್ನುವುದು ಬರೀ ವಿದ್ಯೆ.

'ಮೂರು ಲೋಕ ಮುಳುಗಿ ಹೋದರೂ ಪರವಾಗಿಲ್ಲ, ನಾನು ಚೆನ್ನಾಗಿ ಇರಬೇಕು ಅಷ್ಟೆ' ಅನ್ನುವುದು ದುರ್ವಿದ್ಯೆ.

'ವಿದ್ಯೆ ಬರೀ ಮನಸಿನ ಸರಕಲ್ಲ. ಬುದ್ಧಿಯ ಸರಕಲ್ಲ; ಒಳ ಮನಸ್ಸಿಗೆ ಸಂಬಂಧ ಪಟ್ಟ ಸರಕು.
ದಯೆ, ಕರುಣೆ, ಮರುಕ, ಅನುಕಂಪ - ಇವೆಲ್ಲ ಸದ್ಬುದ್ಧಿಯ ಸಂತಾನ' ಎನ್ನುತ್ತಾರೆ ಶ್ರೀ ಜಿ.ಪಿ. ರಾಜರತ್ನಂ ರವರು.

ನಾವು ಆ ಮೂರನೇ ಗುಂಪಿನ ಶಿಷ್ಯರುಗಳಲ್ಲಿ ಒಬ್ಬರಾದರೆ ನಮ್ಮ ಜೀವನ ಸಾರ್ಥಕವಾಗಬಹುದು. ▪

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ

ಕನಕಾಪುರ ನಾರಾಯಣ
ಇವರ "ಚಕ್ಕೆ ಮೊಗ್ಗು"

ಸುದರ್ಶನ್. ಏನ್
ಇವರ "ಅನಿವಾಸಿ"

ಬದರಿ ತ್ಯಾಮಗೊಂಡ್ಲು
ಇವರ "ಕಾವ್ಯ ಕಸ್ತೂರಿ"

ಸ್ಮಿತಾ ಮೇಲ್ಕೋಟೆ
ಇವರ "ಮಂದಹಾಸ"

ಮಹಾಂತೇಶ್ ಸಿ.
ಇವರ "ಹಂಗ ಸುಮ್ನ್..."

ರಾಂ ರಾಮ

ಇದು ಹಾಸ್ಯ ಪುಟ

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

ಗೊಂಬೆ ಕೂಡ್ಸಿದೀರಾ.....

ಕಟ್ಟಡ ಏನೇ ರಿನೊವೇಶನ್ ಆದ್ರೂ ಫೌಂಡೇಶನ್ ಅದೇ ಅಲ್ವಾ ರಾಯ್ರೇ.... ನಾಸ್ತಿಕರ ಊರಲ್ಲಿ ಆಸ್ತಿಕನೇ ಎಡವಟ್ಕಾಯ ಅಂತ ನನಗೂ ತಿಳಿದಿದೆ. ಆದ್ರೂ... ಅಯ್ನೋರು ಪಟ್ಟಕ್ ಬಂದಿರೋವಾಗ ಅಯ್ಯೋ ಅನ್ನೋವ್ರು ನೊಂದ್ಕೊಳ್ದಿರ್ಲೀಂತ ಸಂಪ್ರದಾಯಬದ್ಧವಾಗಿ ಗೊಂಬೆ ಕೂಡ್ಸಿದೀನಿ. ಚರ್ಪು ಇದೇ ರಾಯ್ರೇ... ನಮ್ಕಾಲದವರಿಗೆ ಸೊಗಸಾದ ಯರಿಯಪ್ಪ, ಈಗಿನವಕ್ಕೆ ಗಾರ್ಲಿಕ್ ಬ್ರೆಡ್ಡು. ಬನ್ನಿ, ಕಣ್ಣೂ ನಾಲ್ಗೇಗೂ ರುಚಿ ತಗುಲಿಸ್ಕೊಂಡೇ ಹೋಗಿ...

ಹೊರಗಿರೋ ಕೆರೆಗೊಂಬೇನೇ? ಅದು **ಬೆಳ್ಳಂದೂರ್ ಗೊಂಬೆ** ಅಂತ. ಲೇಟೆಸ್ಟ್ ಗೊಂಬೆ. ನೊರೆ ನೋಡಕ್ಕೆ ಚೆನ್ನಾಂತ ತಂದ್ರೆ ಬಹಳ ವಾಸನೆ. ದುಡ್ಮೊಟ್ ತಂದ ತಪ್ಪಿಗೆ ಆಗಾಗ್ಗೆ ಸೆಂಟ್ ಹಾಕ್ತಾ ಇರ್ತೀನಿ. ಬನ್ನಿ, ಒಳಗ್ಬನ್ನಿ.

ಹೀಗ್ಬನ್ನಿ. ಇಲ್ಲಿ, ಎಂಟ್ರೆನ್ಸಲ್ಲಿ ಪಿಳಿಪಿಳಿ ಕಣ್ಬಿಡ್ತಾ ಬುದ್ಧಿ ಇದ್ರೂ ಅನುಭವ ಇಲ್ದಿರೋದ್ರಿಂದ ಹೆಜ್ಜೆ ಇಡಲೋ ಬೇಡವೋ, ತಲೆ ಎತ್ತಲೋ ಬೇಡವೋ ಅಂತ ಸಣ್ಣದಾಗಿ ಕೂತಿದೆಯಲ್ಲಾ, ಇದೇ ಈ ವರ್ಷದ ಮೋಸ್ಟ್ ಇಂಪಾರ್ಟೆಂಟ್ ಗೊಂಬೆ. ಒಂದ್ಕಾಲಕ್ಕೆ ವಿದೇಶ್ದಲ್ಲಿದ್ದು, ಓದುಬರಹ ಕಲಿತು, ರಾಜನ ಪಾರ್ಟ್ಗೆ ಲಾಯಕ್ಕೂಂತ ಸೆಲೆಕ್ಟ್ ಆಗಿ ಪಟ್ಟಕ್ಕೆ ಬಂದಿರೋ ಪಟ್ಟದ್ಬೊಂಬೆ ಇದು. ಹೆಸರೇ? **ಯದುವೀರನ ಗೊಂಬೆ** ಸ್ವಾಮಿ. ಸೂಪರ್ರಾಗಿದೆ ಅಲ್ವಾ... ರಾಜನಿಗಿರಬೇಕಾದ ಸುತ್ತಳತೆ ಇಲ್ಲಾಂದ್ರೆ? ಬರತ್ತೆ, ಟೈಮ್ ಆದ್ಹಾಗೆ ಟೈರ್ ಬೆಳೆಯೋದು ನಮ್ಮ ಪರಂಪರೆ.

ಸ್ವಲ್ಪ ಕಿವಿಕೊಡಿ. "ಪುನಾರಚನೆ ಮೂಢನಂಬಿಕೆ" ಅಂತ ಮೆತ್ತಗೆ ಹೇಳ್ತಿರೋದು ಕೇಳಿಸ್ತಿದೆ ಅಲ್ವೇ... ಇಲ್ಲಿ ಪಂಚೆ ಉಟ್ಟು, ಕನ್ನಡಕ ತೊಟ್ಟು ನಿಂತಿರೋ ಗೊಂಬೇನೇ ಹಾಗೆ ಹೇಳ್ತಿರೋದು. ಇದನ್ನ ಜನರು ಪ್ರೀತಿಯಿಂದ ಅಹಿಂದದ್ಬೊಂಬೆ, ನಿದ್ರಾಸುಂದರ, ಸಿಟ್ರಾಯ, ಅಂತೆಲ್ಲ ಕರೀತಾರೆ. ಕೈ ಮೇಲೆ ಎತ್ತಿ ನಿಂತಿರೋ ಈ ಗೊಂಬೇದು ಬಟ್ಟೆ ಬಿಳಿ ಇದ್ರೂ ಮನಸ್ಸು ಕರ್ರಗೆ ಅಂತು ಖರ್ಗೆ ಗೊಂಬೆ. ಅಲ್ಲಾಡ್ತಿರೋ ಚೇರಲ್ಲಿ ಅತಿ ಹೆಚ್ಚು ದಿನ ಕೂತಿದ್ರೂ ಬೀಳೋ ಲಕ್ಷಣ ಕಾಣದೇಯಿರೋ ಈ ಗೊಂಬೇನೇ **ಸಿದ್ದುಗೊಂಬೆ**.

ಅಲ್ನೋಡಿ. ಟೋಫನ್ ಏರಿಸ್ಕೊಂಡು, ಕೈಲಿ ನೋಟಿನ ಕಂತೆ ಹಿಡ್ಕೊಂಡು, ಅಳ್ತಾ ಇರೋವ್ರ ಮುಂದೆ ನಗ್ತಾ ಕೂತಿರೋ ಗೊಂಬೆ ಇದೆಯಲ್ಲಾ, ಅದು ಒಂದ್ಕಾಲದಲ್ಲಿ ಪಟ್ಟದ ಗೊಂಬೆ ಆಗಿತ್ತು. ವಾನಪ್ರಸ್ತಾಶ್ರಮಕ್ಕೆ ಹೊರಟ್ಹೋಗಿದ್ದ ಈ ಗೊಂಬೆಗೆ ಗತಕಾಲದ ವೈಭವ ಫ್ಲಾಷ್ಬ್ಯಾಕ್ಬಂದು ಹೊರಕ್ಬಂದಿದೆ. ಮುಂದಿನ ವರ್ಷ ಪಟ್ಟದ್ ಗೊಂಬೆ ಆಗು ಅಂತ, ಅಲ್ಲಿ, ಆ ಮೂಲೇಲಿರೋ ಹೆಣ್ಬೊಂಬೆ ಇದೆಯಲ್ಲಾ, ವಿದೇಶಿ ಕಲರ್ದು, ಅದು ಹೇಳಿದ್ದಕ್ಕೆ ಇದು ಕತ್ತಾಡಿಸ್ತೋ ಅಥವಾ ಹಳೆ ಗೊಂಬೆ ಆದ್ರಿಂದ ಕತ್ತು ತಾನಾಗೇ ತೂಗ್ತೋ ತಿಳಿದಿಲ್ಲ. ಈ ಗೊಂಬೆ ಜೊತೆ ಒಂದು ಮುದ್ದಾದ ರಮ್ಯಗೊಂಬೆ ಅನ್ನೋದೂ ಅಲ್ಲಲ್ಲಿ ಓಡಾಡ್ತಿತ್ತು. ನೋಡಕ್ಕೆ ಒಳ್ಳೆ ಅಪ್ಪಗೊಂಬೆ, ಮಗುಗೊಂಬೆ ತರಹ ಇತ್ತು. ಈ ಗೊಂಬೆ ಹೆಸರೇ **ಎಸ್ಸೆಮ್ ಕೃಷ್ಣಗೊಂಬೆ**.

ಈ ವಿದೇಶಿ ಗೊಂಬೆ ಯಾವುದೂಂದ್ರೆ? ಒಂದ್ಕಾಲ್ದಲ್ಲಿ ವೇಯ್ಟರ್ ಆಗಿದ್ದು, ಈಗ ಅದರ ಮುಂದೆ ಎಲ್ಲರನ್ನೂ ವೇಯ್ಟ್ ಮಾಡಿಸೋ ಈ ಗೊಂಬೇನ ಹಳೇಕಾಲ್ದಲ್ಲಿದ್ದ ರಾಜೀವ್ ಗೊಂಬೆ ಅನ್ನೋ ಟೊಳ್ಳುಗೊಂಬೆಗೆ ಜೊತೆಯಾಗಿರಲಿ ಅಂತ ಇಟಲಿಯಿಂದ ತಂದಿದ್ದು. ತುಂಬಾ ಹಳೇದಾಗಿರೋದ್ರಿಂದ ಲಡ್ಡಾಗಿದ್ರೂ ಇನ್ನೂ ಹಲವಾರು ಗೊಂಬೆಗಳ ಕಂಟ್ರೋಲ್ ಇದರ ಕೈಲೇ ಇದೆ. ಪೂರ್ತಿ ಚೆನ್ನಾದ್ದು ಸ್ವಾಮಿ, ಬಹಳ ಬೆಲೆ ಬಾಳತ್ತೆ. ಹೆಸರು **ಸೋನಿಯಾ ಗೊಂಬೆ**.

ಅದರ ತೊಡೆ ಮೇಲೆ ಕೂತು "ಅಮ್ಮ ನಿನ್ನ ತೋಳಿನಲ್ಲಿ ಕಂದ ನಾನು. ನಿನ್ನ ಸಂಗ ನಡೆಯಲೆಂದು ಬಂದೆ ನಾನು" ಅಂತ ಬೆರಳ್ಹಿಡ್ಕೊಂಡು, ಬೆಟ್ಟೀಪ್ತಾ ಕೂತಿರೋ ಗೊಂಬೆಯೇ **ರಾಹುಲಗೊಂಬೆ**. ಇದು ಇತ್ತೀಚೆಗೆ ಎಲ್ಲೋ ಕಳೆದ್ಹೋಗ್ಬಿಟ್ಟಿತ್ತು ಅನ್ಕೊಂಡಿದ್ವಿ. ನೋಡಿದ್ರೆ ಬರೀ ಡಾಲ್ ಆಗಿರೋದ್ರ ಬದಲು ಟಾಕಿಂಗ್ ಡಾಲ್ ಆಗಕ್ಕೇಂತ ಫಾರಿನ್ಗೆ ಹೋಗಿತ್ತಂತೆ. ಅದೇನು ಸಾಫ್ಟ್ವೇರ್ ಎರರ್ರೋ ಏನೋ. ಆಡೋದೆಲ್ಲ ಅಪದ್ಧವೇ ಆಗ್ಬಿಟ್ಟಿದೆ.

ಅದರ ಪಕ್ಕದಲ್ಲಿ ವಯಸ್ಸಾದ ಗೊಂಬೆ ಒಂದು ತೂಕಡಿಸ್ತಾ ಕೂತಿದೆಯಲ್ಲ, ಇದಂತೂ ಸೂಪರ್ ಗೊಂಬೆ. ತೂಕಡಿಸೋ ಟೈಮಲ್ಲೇ ಎಲ್ಲ ಗೊಂಬೆಗಳ ತೂಕಾನೂ ತಿಳ್ಕೊಂಡ್ಬಿಡೋ ಈ ಗೊಂಬೆ ಲೆಕ್ಕದಲ್ಲಿ ಬಹಳ ಸ್ಟ್ರಾಂಗು. ಎಲ್ಲರೂ ಹಂಡ್ರೆಡ್ ಈಸ್ ಗ್ರೇಟರ್ ದ್ಯಾನ್ ಫೋರ್ಟೀನ್ ಅಂತ್ಹೇಳ್ತಿದ್ರೆ, ಇದು ನೋ, ಫೋರ್ಟೀನ್ ಈಸ್ ಗ್ರೇಟರ್ ಅಂತ ಸಾಧಿಸಿಯೇ ತೋರಿಸ್ಬಿಡ್ತು. ಅಮ್ಮನ ತಿಥಿ, ದೇಶದ ತಿಥಿ, ನಂಬಿದವರ ತಿಥಿ ಚೆನ್ನಾಗಿ ಮಾಡ್ಸೋ ಒಂದು ವಿಧವಾದ ವೈದಿಕಗೊಂಬೆಯಾದ ಇದು ಒಂದು ತೊಗೊಂಡ್ರೆ ಎರಡು ಫ್ರೀ ಸ್ಕೀಮಲ್ಲಿ ಸಿಕ್ಕಿದ್ದು. ಹೆಸರು **ಗೌಡಗೊಂಬೆ**.

ಮುಂದಿನ ಪುಟ ನೋಡಿ ...

ಇದರ ಜೊತೆ ಬಂದ ಗೊಂಬೆಗಳೂ ಯಾವ್ದೊಂದ್ರೆ? ಅಲ್ಲಿ, ಕೈಲಿ ಹಾಲಿನ ಬಾಟಲ್ ಹಿಡ್ಕೊಂಡು ಮೂಲೇಲಿ ನಿಂತಿದೆಯಲ್ಲ, ಅದು **ರೇವಣ್ಣಗೊಂಬೆ**. ಈ ಕಡೆ ಗಂಡೊಂದು, ಹೆಣ್ಣೆರಡು ಇದೆಯಲ್ಲ, ಅದೇರೀ. ಆ ಹೆಣ್ಣು ಕೈಲೊಂದು ಟಿವಿ ಹಿಡ್ಕೊಂಡು ನಿಂತಿದೆಯಲ್ಲ, ಆ ಗೊಂಬೇನೇ **ಕುಮಾರಣ್ಣಗೊಂಬೆ**. ಇದನ್ನ ಗೌಡಗೊಂಬೆಯಿಂದ ದೂರ ಇಟ್ರೆ ಗೌಡಗೊಂಬೆ ಗುಟುರು ಹಾಕೋದ್ರಿಂದ ಇವು ಮೂರೂ ಒಟ್ಟಿಗೇ ಇರತ್ವೆ.

ಇಲ್ಲೊಂದು ನೂರು ಗೊಂಬೆಗಳ ಸೆಟ್ ಇದೆ ನೋಡಿ. ಇದು **ಬಿಬಿಎಂಪಿ ಗೊಂಬೆ ಸೆಟ್** ಅಂತ. ಎಲ್ಲ ಹೆಣ್ಣುಗೊಂಬೆಗಳೇ. ಇವನ್ನು **ಕಾರ್ಪೊರೇಟರ್ ಗೊಂಬೆಗಳು** ಅಂತಾರೆ. "ನಿಮಗೆ ಓಲೆ ಬಂದಿದೆ ಮೇಡಂ" ಅಂತ ಲೆಟರ್ ಬಗ್ಗೆ ಹೇಳಿದ್ರೆ "ಹೌದಾ? ಯಾವ ಡಿಸೈನು? ಎಷ್ಟು ಗ್ರಾಂ? ಯಾವ ಜ್ಯುಯೆಲರ್ಸ್‌ದು?" ಅನ್ನೋ ಈ ನೂರೂ ಗೊಂಬೆಗಳು ಪಟ್ಟಕ್ಕುಂಟು, ಪೂಜೆಗಿಲ್ಲ ಅನ್ನೋ ರೀತಿಯವು. ಇವೆಲ್ಲವುಗಳ ಕೀನ ಅವುಗಳ ಹಿಂದೆ ಇರೋ ಗಂಡಗೊಂಬೆಗಳು ಇಟ್ಕೊಂಡಿವೆ. ಅವೆಲ್ಲವುಗಳ ಮಾಸ್ಟರ್ ಕೀ ಗೌಡಗೊಂಬೆ ಹತ್ತಿರ ಇದೆ. ಸ್ಟುಪಿಡ್ ಆದ್ರೂ ಬಹಳ ಬ್ಯೂಟಿಫುಲ್ ಗೊಂಬೆಸೆಟ್ ಇದು.

ಅಲ್ಲಿ, ಆ ಗೋಡೆಬದೀಲಿ ಇರೋ ಗೊಂಬೆಗಳೇ ಬೇರೆ ರೀತಿಯವು. ನೋಡಕ್ಕೆ ಅಂದ ಇದ್ರೂ ಬಾಯ್ಬಿಟ್ರೆ ಬಣ್ಣೇಡಿ ಗೊಂಬೆಗಳು ಇವು. ಮುಂದುಗಡೇನೇ ಪೊರ್ಕೆ ಇಟ್ಕೊಂಡು "ರಾಜರ ಅರಮನೇನ ಲಂಚದ ಅರಮನೆ ಮಾಡಿ" ಅಂತ್ಹೇಳ್ತಾ ನಿಂತಿರೋದು ಕಳೆ ಕಡಿಯಕ್ಕೆ ಟೈಮು, ಗಡ್ಡ ಕೆರೆಯಕ್ಕೆ ಟೈಮಿಲ್ದೆ ಇರೋ **ಕಡಿದಾಳ್ಬೊಂಬೆ**. ದಸರಾ ದಿವಸ ಅದನ್ನೇ ಮುಂದೆ ನಿಲ್ಸೋಣಾಂತ ಹೋದ್ರೆ ಕಸ ಗುಡಿಸಕ್ಕೆ ಠೇಮಾಯ್ತು, ನನ್ನ ವಿಧಾನಸೌಧಕ್ಕೆ ಡ್ರಾಪ್ ಮಾಡಿ ಅಂತಲ್ಲಾಂತ ಬೇರೆ ಕಡೆ ನಿಲ್ಸಿದೀವಿ.

ಅದಕ್ಕೆ ಸ್ವಲ್ಪ ಹಿಂದೆ ಟೂತ್‌ಪೇಸ್ಟ್ ಅಡ್ವರ್ಟೈಸ್‌ಮೆಂಟ್ಗೆ ಪೋಸ್ ಕೊಡೋ ತರಹ ಹಲ್ಬಿಟ್ಟು, ಕೈಲಿ ವಿಧವಿಧವಾದ ಚೌರಿ ಹಿಡ್ಕೊಂಡು ನಿಂತಿರೋದೇ **ಶೋಭಾಗೊಂಬೆ**. ಒಂದ್ಕಾಲ್ದಲ್ಲಿ ವೈಷ್ಣೋದೇವಿ ಭಕ್ತನ ಆಡಳಿತ ಇದ್ದಾಗ ಆಡಳಿತವನ್ನೇ ಶೋಭಾಯಮಾನವಾಗಿ ಇರಿಸಿದ್ದ ಈ ಗೊಂಬೆ ಈಗ ಹೇರ್ ಕಂಪೇರಿಂಗ್ ಸೆಂಟರ್ ತೆರೆದಿದೆ. ಮೊನ್ನೆ ತಾನೇ ಮುಖ್ಯಮಂತ್ರಿಗಳ ಕೂದಲನ್ನ ಪ್ರಧಾನಿಗಳ ಕೂದಲಿಗೆ ಕಂಪೇರ್ ಮಾಡಿ ಮುಖ್ಯಮಂತ್ರಿ ಪ್ರಧಾನಿ ಕೂದಲಿಗೂ ಸಮ ಇಲ್ಲ ಅಂತ ಲ್ಯಾಬ್ ರಿಪೋರ್ಟ್ ಕೊಟ್ಟಿದೆ. ಹತ್ರ ಹೋಗ್ಬೇಡಿ. ನೋಡಕ್ಕೆ ಸುಂದರವಾಗಿದ್ರೂ ಇತ್ತೀಚೆಗೆ ಬಹಳ ಬಾಯ್ವಾಸನೆ ಬಂದ್ಬಿಟ್ಟಿದೆ.

ಅಲ್ಲಿ ಮೂರು ಹೆಂಗಸರ ಒಂದು ಸೆಟ್ ಇದೆ ನೋಡಿದ್ರಾ.. ಅದೇ **ತ್ರಿಸ್ತ್ರೀಗೊಂಬೆ** ಅಥವಾ **ಸುಷ್ಮಾ-ವಸುಂಧರಾ-ಪಂಕಜ ಸೆಟ್**. ಸಾಮಾನ್ಯವಾಗಿ ಲೌಡ್ ಸ್ಪೀಕರ್ನಲ್ಲಿ ಮಾತಾಡೋ ತರಹ ಕಿರುಚಿ ಮಾತಾಡೋ ಈ ಮಾತೆಯರ ಗೊಂಬೆಸೆಟ್ "ಲಲಿತ್" ಅಂದ ತಕ್ಷಣ ಗಪ್‌ಚುಪ್ ಆಗತ್ತೆ. ಬಂದವರಿಗೆಲ್ಲ ಅದೇ ಆಟ. ಕೀ ಕೊಡೋದು, ಓ ಅಂತ ಮಾತಾಡಿದ ತಕ್ಷಣ ಲಲಿತ್ ಅನ್ನೋದು. ಅದು ಅರ್ಧ ಮಾತಲ್ಲೇ ಮಾತು ನಿಲ್ಲಿಸೋದನ್ನ ನೋಡಿ ನಗೋದು. ಬಹಳ ವಂಡರ್ಫುಲ್ ಸೆಟ್ ಇದು.

ಇಲ್ಲಿ ಬಹಳ ಚುರುಕಾಗಿ ಓಡಾಡ್ತಿರೋ ಯುವಕನ ಗೊಂಬೆ ಇತ್ತೀಚಿನ ಮಾಡಲ್. **ಪಟೇಲ್‌ಗೊಂಬೆ** ಅಂತ ಗುಜರಾತಲ್ಲೆಲ್ಲ ಬಹಳ ಫೇಮಸ್. ಆತ್ಮಹತ್ಯೆ ಮಹಾಪಾಪ ಅನ್ನೋ ಈ ಗೊಂಬೆ ಮಾತು ಕೇಳಕ್ಕೇ ಚೆನ್ನ. "ನೀವು ಸಾಯ್ಬೇಡಿ. ಬೇಕಾದ್ರೆ ಪೊಲೀಸ್‌ನ ಸಾಯ್ಸಿ" ಅನ್ನೋದನ್ನೇ ಗೊಂಬೆ ತಯಾರ್ಸೋವ್ನು ಹೈಲೈಟ್ ಮಾಡಕ್ಕೇಂತ ಅವನ ಕಾಲ ಕೆಳಗೆ ಇಬ್ರು ಕೊಲೆಯಾದ ಪೊಲೀಸರ ಚಿತ್ರ ಬಿಡಿಸಿದ್ದಾನೆ. ಚಾನ್ಸ್ ಸಿಕ್ರೆ ಒಂದಲ್ಲ ಒಂದು ದಿವಸ ಇದೂ ಪಟ್ಟದ ಗೊಂಬೆ ಆಗಬಹುದೇನೋ...

ಮುಖ್ಯವಾದ್ದನ್ನೇ ಬಿಟ್ರಲ್ಲಾ... ಫ್ಲೈಟ್ ಮೋಡಲ್ಲಿರೋ ಪಟ್ಟದ ಗೊಂಬೆ. ಎಲ್ಲ ಗೊಂಬೆಗಳು ಫಾರಿನ್ ಬ್ಯಾಂಕಲ್ಲಿ ಅಕೌಂಟ್ ಇಡಕ್ಕೇಂತ ಹೋದ್ರೆ ಈ ಗೊಂಬೆ ಹೋದಲ್ಲೆಲ್ಲ ಮಾತಾಡೀ, ಆಡೀ, ಆಡೀ ಅವರಿಂದಾನೇ ಬಂಡ್ವಾಳ ತೊಗೊಂಡ್ಬರತ್ತೆ. ಇದರ ಚೆಕ್ಕ ಮಾಡಲ್ಲು ಚಾ, ಟೀ ಅನ್ತಿತ್ತು. ದೊಡ್ಡ ಮಾಡಲ್ಲು ದೇಶದ ಚಾಟಿ ಹಿಡೀತು. ಬಹಳ ವ್ಯವಹಾರಸ್ಥ ಗೊಂಬೆಯಾದ ಇದರಿಂದ ಇಡೀ ನವರಾತ್ರಿಗೇ ಲಾಭವಂತೆ. ಕೀ ಕೊಡದೇ ಇದ್ರೂ ಹತ್ತಾರು ದಿವಸ ಮಾತನಾಡೋ ಈ ಟಾಕಿಂಗ್ ಡಾಲೇ ಈಗ ದೇಶಕ್ಕೇ ಮೆಚ್ಚುಗೆಯಾದ **ಮೋದಿಗೊಂಬೆ**.

ಈ ಕಡೆ ಇರೋವೆಲ್ಲ ಹಳೆ ಗೊಂಬೆಗಳು ಬಿಡಿ. ಡುಮ್ಮುಮ್ಮಕ್ಕೆ, ಕೈಲಿ ಬಕೆಟ್ಟಿಡ್ಕೊಂಡು 'ಕಾವೇರೀ...' ಅಂತಿರೋದು **ಜೈಲಲಿತಾಗೊಂಬೆ**; ಹೊಗೆಹಾಕಿಸ್ಕೊಳೋ ಲೆವೆಲ್ಲಲ್ಲಿದ್ರೂ ಹೊಗೆನಿಕಲ್ ಅಂತಿರೋದು **ಕರುಣಾನಿಧಿ ಗೊಂಬೆ**; ನಾ ಬಂದೆ, ನಾ ಬಂದೆ ಅಂತಿರೋದು **ಖರ್ಗೆಗೊಂಬೆ**; ಹುಲ್ಲು ತಿಂತ ತಿಕ್ಕಲುತಿಕ್ಕಲಾಗಿ ತಲೆ ಆಡಿಸ್ತಿರೋದು **ಲಾಲೂಗೊಂಬೆ**; ಮೋದಿಗೊಂಬೇನ ತಬ್ಕೊಂಡಿರೋದು **ಒಬಾಮಾಗೊಂಬೆ**.....

ನಿಲ್ರೀ, ಆ ಗೊಂಬೆ ಹತ್ರ ಹೋಗ್ಬೇಡಿ. ಬೇಡರೀ... ಛೆ! ಬನ್ನಿ, ಒಳಗ್ಬನ್ನಿ. ಅದು ಸಿಸ್ಟಮ್ ಎರರ್ನಿಂದ ಬಂದ್ಬಿಟ್ಟಿರೋ ಗೊಂಬೆ. ಬಹಳ ಹೊಲಸು ಗೊಂಬೆಯಾದ್ರಿಂದ ಆಚೇನೇ ನಿಲ್ಸಿದೀವಿ. ರಾಮಾಯಣ, ಮಹಾಭಾರತ, ಭಗವದ್ಗೀತೆ ಅಂದ್ರೆ ಸಾಕು, ಈ ಗೊಂಬೆ ಬಾಯಿಂದ ಬಹಳ ದುರ್ವಾಸನೆ ಹೊರಡತ್ತೆ. ಯಾರ್ಯಾದ್ರೋ ಸುಳ್ಸುಳ್ಳು ಬರ್ತ್ ಸರ್ಟಿಫಿಕೇಟ್ ಇಟ್ಕೊಂಡು ಜನ್ಮ ಜಾಲಾಡ್ತೀನಿ ಅಂತ ಅರಚಾಡೋ ಈ ಮತಿಭ್ರಮಿತರ ರೀತಿ ಕಾಣೋ ಗೊಂಬೇನೇ **ಭಗವಾನ್‌ಗೊಂಬೆ**. ಛೆ! ಅದರ್ಮಾತ್ ಕಿವೀಗ್ ಬಿತ್ತು ಅಂದ್ರೆ? ತೊಗೊಳಿ, ಈ ಡೆಟಾಲ್ ಹಾಕ್ಕೊಂಡು ಕಿವಿ ಕ್ಲೀನ್ ಮಾಡ್ಕೊಳಿ.

ಏನು, ಹೊರಟೇಬಿಟ್ರೇ? ಪಾಪ! ಟ್ರಾಫಿಕ್ಕೋ ಟೆರಿಫಿಕ್ಕು. ಫೇಸ್ಬುಕ್ಕು, ಮೊಬೈಲು ಬಿಟ್ಟು ಇಷ್ಟೊತ್ ನನ್ಜೊತೆ ಇದ್ದದ್ದಕ್ಕೆ ಥ್ಯಾಂಕ್ಸ್. ಹ್ಯಾಪಿ ವಿಜಯದಶಮಿ. ▪



ನ್ಯೂ ಸೌಥ್ ವೇಲ್ಸ್ ರಾಜ್ಯ ಪುಷ್ಪ – ವಾರಾಥ

ಆಸ್ಟ್ರೇಲಿಯಾದ ಹೂವುಗಳು

ಮಾಹಿತಿ ಸಂಗ್ರಹ: ಬದರಿ ತ್ಯಾಮಗೊಂಡ್ಲು

- ದುಂಡನೆಯ ಆಕೃತಿಯ ಮತ್ತು ದಪ್ಪ ಮತ್ತು ದಟ್ಟವಾದ ಕುಸುಮಗಳು ಹೊಂದಿದ ಈ ಹೂವು ದಟ್ಟ ಕೆಂಪು ಬಣ್ಣದ್ದಾಗಿರುತ್ತದೆ
- ಈ ಹೂವು ಸುಮಾರು ೧೦ ಸೆಂಟಿಮೀಟರ್ ನಷ್ಟು ದೊಡ್ಡದಾಗಿರುತ್ತದೆ
- ಹೆಚ್ಚಾಗಿ ಸೆಪ್ಟೆಂಬರ್ ಮತ್ತು ನವೆಂಬರ್ ತಿಂಗಳ ನಡುವೆ ಅರಳುವ ಈ ಹೂವಿಗೆ ಪರಾಗಸ್ಪರ್ಶ ಮಾಡುವುದು, ಮಕರಂದ ಕುಡಿಯಲು ಬರುವ ಹಕ್ಕಿಗಳು
- ಆಸ್ಟ್ರೇಲಿಯಾದ ಮೂಲನಿವಾಸಿಗಳು ಬಳಸುವ ಹೆಸರನ್ನು ಹಾಗೆ ಉಳಿಸಿಕೊಂಡು ಬಳಸುತ್ತಿರುವ ಕೆಲವೇ ಹೆಸರುಗಳಲ್ಲಿ ಈ ಹೂವಿನ ಹೆಸರೂ ಒಂದು
- ಸಸ್ಯ ಶಾಸ್ತ್ರೀಯ ಹೆಸರು ಟೆಲೋಪಿಯ ಸ್ಪೆಸ್ಸಿಯೋಸ್ಸಿಮ
- ಕುರುಚಲು ಗಿಡದಂತೆ ಬೆಳೆವ ಈ ಹೂವಿನ ಸಸ್ಯವು ಸುಮಾರು ನಾಲ್ಕು ಮೀಟರ್ ನಷ್ಟು ಎತ್ತರ ಬೆಳೆಯಬಲ್ಲದು
- ಈ ಗಿಡದ ಹೂವಿನಿಂದ ಆಸ್ಟ್ರೇಲಿಯಾದ ಮೂಲನಿವಾಸಿಗಳು ಔಷಧಿಯನ್ನು ತಯಾರಿಸುತ್ತಿದ್ದರು ಎಂದು ಹೇಳಲಾಗುತ್ತದೆ ▪

ಅರಳಿರುವ ವಾರಾಥ ಹೂವು

ವಾರಾಥ ಹೂವಿನ ಗಿಡ

ನ್ಯೂ ಸೌಥ್ ವೇಲ್ಸ್ ರಾಜ್ಯದ ಲಾಂಛನದಲ್ಲಿ ವಾರಾಥ ಹೂವು

ಕನ್ನಡದಲ್ಲಿ ಟೈಪ್ ಮಾಡೋದು ಹೇಗೆ

ಹೊರನಾಡ ಚಿಲುಮೆ - ಸೆಪ್ಟೆಂಬರ್ ೨೦೧೩ ರ ಸಂಚಿಕೆಯಲ್ಲಿ google input tools ಉಪಯೋಗಿಸಿ ಕನ್ನಡದಲ್ಲಿ ಹೇಗೆ ಟೈಪ್ ಮಾಡಬಹುದು ಎಂದು ತಿಳಿದು ಕೊಂಡಿರಿ.

ಪೂರ್ಣ ಮಾಹಿತಿಗೆ ಸೆಪ್ಟೆಂಬರ್ ೨೦೧೩ ರ ಸಂಚಿಕೆಯನ್ನು ನೋಡಲು ಈ ಲಿಂಕ್ ಕ್ಲಿಕ್ ಮಾಡಿ.

ಸಂಕ್ಷಿಪ್ತ ಮಾಹಿತಿ ಇಲ್ಲಿದೆ

ಗೂಗಲ್ ಇನ್ಪುಟ್ ಟೂಲ್ಸ್ (Google input tools) ಯೂನಿಕೋಡ್ ಆಧಾರಿತ ಒಂದು ತಂತ್ರಾಂಶ. ಇದನ್ನು ನಿಮ್ಮ ಕಂಪ್ಯೂಟರ್ ನಲ್ಲಿ install ಮಾಡಿದರೆ ಕನ್ನಡದಲ್ಲಿ ನೀವು ನೇರವಾಗಿ word, excel ಇತ್ಯಾದಿ office ಸಾಫ್ಟ್ವೇರ್ ಅಲ್ಲದೆ, ಸಮಾಜ ತಾಣಗಳಾದ ಫೇಸ್ಬುಕ್ , ಜಿ-ಪ್ಲಸ್ ಇತ್ಯಾದಿಗಳಲ್ಲೂ ಟೈಪ್ ಮಾಡಬಹುದು.

INSTALL ಮಾಡುವ ಮತ್ತು ಉಪಯೋಗಿಸುವ ವಿಧಾನ

1. http://www.google.com/inputtools/windows/index.html - ಈ ಲಿಂಕ್ ಕ್ಲಿಕ್ ಮಾಡಿ

   ಇರುವ ಹಲವಾರು ಭಾಷೆಗಳ ಲಿಸ್ಟ್ ನಲ್ಲಿ ಕನ್ನಡ ಕ್ಲಿಕ್ ಮಾಡಿ install ಮಾಡಿ.

ಆಂಗ್ಲ ಭಾಷೆಯಲ್ಲಿ ಟೈಪ್ ಮಾಡುತ್ತಿದ್ದಾಗ ಕನ್ನಡ ಟೈಪ್ ಮಾಡಲು ಒಟ್ಟಿಗೆ CTRL + G ಕೀ ಒತ್ತಿ. ಆಗ ಆಂಗ್ಲದಿಂದ ಕನ್ನಡಕ್ಕೆ ಕೀಲಿಮಣೆ ಸಿದ್ಧವಾಗುತ್ತದೆ. ನಂತರ ನೀವು ಮತ್ತೆ ಆಂಗ್ಲ ಪದ ಬಳಸಬೇಕಾದರೆ ಮತ್ತೆ CTRL + G ಕೀ ಒಟ್ಟಿಗೆ ಒತ್ತಿ.

ಸೂಚನೆ: ಕೆಲವೊಮ್ಮೆ ಈ ಬಾಕ್ಸ್ ಕಾಣಿಸದಿದ್ದರೆ ಒಟ್ಟಿಗೆ ALT + SHIFT ಕೀ ಒತ್ತಿ

ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: horanadachilume@gmail.com

SRI KRISHNA TRAVEL
Travel with a Smile

Contact Mr Sudheendra Rao EMAIL
Mobile 0415 291 723

choice HOME LOANS

Contact Mr.Sathya Bhat EMAIL
Mobile 0412 918 511

Umesh Nagasandra FT
ABN 55 405 83 51 32
Umesh Nagasandra
Mob: 0401 034 456
Email: umesh61@gmail.com
Web: www.arman.com.au
P.O. Box # 4127, Tranmere North, South Australia-5073, Australia.

Contact Mr Umesh EMAIL
Mobile 0401 034 456

AUSTINDIA SANGAM TRANSPORT

Contact Mr Eranna Gotyal EMAIL
Mobile 0404 215 605

ದೂರದೃಷ್ಟಿ

ಕನಕಾಪುರ ನಾರಾಯಣ

ಒಂದಾನೊಂದು ಕಾಲದಲ್ಲಿ ಮಹರ್ಷಿಯೊಬ್ಬ ತನ್ನ ಊರಿನ ಕ್ಷೇಮಕ್ಕೆ ಯಾಗವೊಂದನ್ನು ಮಾಡಲು ತಯಾರಿ ನಡೆಸಿದ್ದ. ಆತನಿಗೆ ಕೆಲವು ದಡ್ಡ ಶಿಷ್ಯರು ಇದ್ದರು. ಯಾಗ ನಡೆಯುವ ದಿನ ಬೆಳಿಗ್ಗೆ ಮಹರ್ಷಿಯ ಹೆಂಡತಿ ಆತಂಕದಿಂದ ತನ್ನ ಪತಿಯ ಶಿಷ್ಯರನ್ನು ಕರೆದು "ಅಯ್ಯಾ ಮಕ್ಕಳಾ ಈ ದಿನ ಅಡುಗೆ ಮಾಡಲು ಕುಟೀರದಲ್ಲಿ ಸೌದೆ ಬಹಳ ಕಡಿಮೆ ಇದೆ, ದಯವಿಟ್ಟು ತಾವು ಕಾಡಿಗೆ ಹೋಗಿ ಇವತ್ತಿನ ಮಟ್ಟಕ್ಕೆ ಆಗುವಷ್ಟು ಕಟ್ಟಿಗೆ ಕಡಿದು ಬೇಗ ಬನ್ನಿ" ಎಂದು ಕೇಳಿಕೊಂಡಳು.

ಅಡುಗೆ ಎಂದಾಕ್ಷಣ ಶಿಷ್ಯರು ಥೈ ಎಂದು ಹೊರಟೇ ಬಿಟ್ಟರು ಕಾಡಿಗೆ. ಒಣ ಕಟ್ಟಿಗೆ ಕಡಿದು, ಆಯ್ದು ಗುಡ್ಡೆ ಹಾಕುತ್ತಿರಲು ಆ ಗುಂಪಿನಲ್ಲೊಬ್ಬ ಹೇಳಿದ "ಅಯ್ಯಾ ಗೆಳೆಯರಾ, ಇನ್ನಷ್ಟು ಕಟ್ಟಿಗೆ ಕಲೆ ಹಾಕಿರಿ ಮತ್ತೆ ನಾಳೆ ಬರುವಷ್ಟಿಲ್ಲ"ಎಂದ. ಮತ್ತೊಬ್ಬ "ಅದು ಸರಿ, ಹೇಗಿದ್ದರೂ ಇಲ್ಲಿಯವರೆಗೆ ಬಂದಿದ್ದೀವಿ ಒಂದು ವಾರಕ್ಕೆ ಆಗುವಷ್ಟು ಸೇರಿಸಿ ಬಿಡೋಣ" ಎಂದು ನುಡಿದ. ಅದಕ್ಕೆ ಮತ್ತೊಬ್ಬ ಶಿಷ್ಯ "ಮತ್ತೊಂದು ವಾರ ಸಾಕೆ? ಸಮಯ ಬಹಳ ಇದೆ, ಒಂದು ತಿಂಗಳಿಗೆ ಆಗುವಷ್ಟೇ ತೆಗೆದುಕೊಂಡು ಹೋಗೋಣ" ಎಂದ. ಎಲ್ಲರೂ ಕಟ್ಟಿಗೆಯ ರಾಶಿಗೆ ಒಣಮರದ ತುಂಡು, ರೆಂಬೆ, ಕೊಂಬೆ ಎಳೆದು-ಹೊತ್ತು ತಂದು ಸೇರಿಸುತ್ತಿರಲು ಹೊತ್ತೇ ಕಳೆದದ್ದು ತಿಳಿಯಲಿಲ್ಲ. ಮಧ್ಯಾಹ್ನ ಮುಗಿದು ಸಂಜೆಯ ಸಮಯವಾಗುತ್ತಾ ಬಂದಿತು. ಅತ್ತ ಆಶ್ರಮದಲ್ಲಿ ಮಹರ್ಷಿಯು ಶಿಷ್ಯರನ್ನು ಕಾಣದೆ ಸತಿಯನ್ನು ವಿಚಾರಿಸಲು ವಿಷಯ ತಿಳಿಯಿತು. ಸಿಟ್ಟಿನಿಂದ ತನ್ನ ದಡ್ಡ ಶಿಷ್ಯರನ್ನು ಹುಡುಕಿಕೊಂಡು ಕಾಡಿಗೆ ಬಂದನು. ಅಲ್ಲಿ ಅವರು ಇನ್ನೂ ಕಟ್ಟಿಗೆಗಳನ್ನು ತರುತ್ತಲೇ ಇದ್ದರು. ಅವರನ್ನು ತಡೆದು, ಬೈದು, ಬುದ್ಧಿವಾದ ಹೇಳಿದರು, "ನನ್ನ ಹೆಂಡತಿ ನಿಮಗೆ ಹೇಳಿದ್ದು ಈ ದಿನದ ಮಟ್ಟಕ್ಕೆ ಸೌದೆ ತನ್ನಿ ಎಂದು, ನೀವುಗಳು ನೋಡಿದರೆ ರಾಶಿಯನ್ನೇ ಗುಡ್ಡೆಹಾಕಿದ್ದೀರಿ, ಇನ್ನು ಇದನ್ನು ಹೊರುವುದಾದರೂ ಹೇಗೆ? ನಮಗೆ ಯಾವಾಗಲೂ ಅತಿಯಾಸೆ, ದುರಾಸೆ ಇರಕೂಡದು. ಒಮ್ಮೆಲೇ ಎಲ್ಲಾ ಮಾಡಿಬಿಡಬೇಕು, ಕೂಡಲೇ ಎಲ್ಲಾ ಕಲಿತುಬಿಡಬೇಕು, ಬೇಗನೇ ಎಲ್ಲಾ ಸಂಪಾದಿಸಿಬಿಡಬೇಕು ಎನ್ನುವುದು ಸಮಂಜಸವಲ್ಲ" ಎಂದು ಹೇಳಿ ಅವರನ್ನೆಲ್ಲಾ ಆಶ್ರಮಕ್ಕೆ ಕರೆದುಕೊಂಡು ಹೋದರು. ▪

ಮೈಸೂರ್ ಪಾಕ್

ಬೇಕಾಗುವ ಸಾಮಗ್ರಿಗಳು

- ಎರಡು ಬಟ್ಟಲು ಕಡಲೇಹಿಟ್ಟು
- ಕಾಲು ಕಿಲೋ ತುಪ್ಪ, ನೀರು(ಕಾಲು ಲೋಟ), ಸಕ್ಕರೆ - ಕಾಲು ಕಿಲೋ

ಮಾಡುವ ವಿಧಾನ

- ಮೊದಲು ಕಡಲೆ ಹಿಟ್ಟನ್ನು ಸ್ವಲ್ಪತುಪ್ಪದಲ್ಲಿ ಘಮಘಮ ವಾಸನೆ ಬರುವವರೆಗೂ ಹುರಿಯಿರಿ
- ಸಕ್ಕರೆಗೆ ನೀರು ಹಾಕಿ ಗಟ್ಟಿ ಎಳೆಪಾಕ ಬರುವಂತೆ ಕುದಿಸಿ
- ಪಾಕ ಚೆನ್ನಾಗಿ ಎಳೆ ಬಂದಮೇಲೆ ಒಲೆಯಮೇಲಿದ್ದಾಗಲೇ ಅದಕ್ಕೆ ಹಿಟ್ಟನ್ನು ಸುರಿಯಿರಿ
- ಉಳಿದ ತುಪ್ಪವನ್ನು ಒಂದೇಸಮನೆ ಹಾಕುತ್ತಾ ತಿರುವುತ್ತಿರಿ. ಮಿಶ್ರಣ ಪಾತ್ರೆಯ ತಳ ಬಿಡುವ ಹೊತ್ತಿಗೆ ತುಪ್ಪ ಸವರಿದ ತಟ್ಟೆಗೆ ಸುರಿಯಿರಿ. ಐದು ನಿಮಿಷದ ಬಳಿಕ ಚಾಕುವಿನಿಂದ ಬೇಕಾದ ಆಕಾರಕ್ಕೆ ಕತ್ತರಿಸಿ
- ನಂತರ ಒಂದು ಕಾಗದದ ಮೇಲೆ ಬೋರಲು ಹಾಕಿ. ಮೈಸೂರ್ ಪಾಕ್ ತಾನಾಗೇ ಬಿಡಿಬಿಡಿಯಾಗಿ ಇದ್ದು ತಿನ್ನಲು ಚೆನ್ನ

ಇನ್ನೂ ನೂರಾರು ರೆಸಿಪ್ಪಿಗಳಿಗೆ **www.sugamakannada.com** ಗೆ ಭೇಟಿಕೊಡಿ.

ರೆಸಿಪಿ ಕೊಡ್ತೀರಾ!

ಒಂದರಲ್ಲೊಂದು ಒಗಟು

೧.ನವರಾತ್ರಿಯ ಜಂಬೂ ಸವಾರಿಯಲ್ಲಿ ದೇವಿಯನ್ನು ಈ ಮೂರಕ್ಷರದ ಆಸನದಲ್ಲಿಡುತ್ತಾರೆ
೨.ಮೊದಲೆರೆಡಕ್ಷರವು ಹಸುವು ಕೂಗುವುದನ್ನು ಸೂಚಿಸುತ್ತದೆ
೩.ಕೊನೆಯೆರಡು ಕೂಡಿದರೆ ಎಷ್ಟುಸಲವೆಂಬ ಅರ್ಥ ಬರುತ್ತದೆ
೪.ಮೊದಲಿನ ಅಕ್ಷರದ ಅನುಸ್ವಾರ ತೆಗೆದು ಕೊನೆಯಕ್ಷರ ಸೇರಿಸಿದರೆ ಶತ್ರುವೆಂದಾಗುವುದು

ಉತ್ತರಕ್ಕೆ ಪುಟ ೧೧ ನೋಡಿ

ಗೆ ...

ನೀನಿಲ್ಲದ ಈ ಸಂಜೆ
ಬರಿ ಬಂಜೆ
ಗೆಳೆಯ;
ನೀನಿಲ್ಲದ ಈ ಸಂಜೆ
ಸೊಗವಿಲ್ಲದ
ಹರಯ;

ಮುಗಿಲಾಡುವ
ಆ ಬಾನಿನ
ಮೋರೆ
ಬರಿದಾಗಿದೆ
ನೀರ

ಮರೆಯಾಗಿವೆ ಆ
ಬಾನಾಡಿಗಳು;
ಬರದಾಗಿದೆ
ತಾರ
ಬರಡಾಗಿದೆ
ತೀರ;

ಇರುಳಾಡಿದೆ ಈ
ಸರಿಯುವ ಕಾಲ;
ಉರುಳಾಗಿದೆ
ಮುಡಿದಿಹ
ಮಾಲ;

ಉರಿಯಾಗಿದೆ
ವಿರಹ;
ಗಳೆಯ ಏಕೆ
ಅರಿ ಯಾಗಿಹೆ
ಈ
ತರಹ

-ಮಾಲು, ಅಡಿಲೈಡ್

ಜಾಣ ಕರ್ನಾಟಕ

೧. ಕರ್ನಾಟಕದಲ್ಲಿ ಪ್ರಥಮ ರೇಡಿಯೋ ಕೇಂದ್ರ ಆರಂಭಿಸಿದವರು ಯಾರು? ಯಾವಾಗ ಮತ್ತು ಎಲ್ಲಿ ಆರಂಭವಾಯಿತು?.

೨. 'ಆಲ್ ಇಂಡಿಯಾ ರೇಡಿಯೋ' ಗೆ ಆಕಾಶವಾಣಿ ಎಂದು ಹೆಸರು ಸೂಚಿಸಿದವರು ಯಾರು?

ಸರಿ ಉತ್ತರಕ್ಕೆ ಪುಟ ೧೬ ನೋಡಿ

ಒಂದರಲ್ಲೊಂದು ಒಗಟು – ಉತ್ತರ

೧. ಅಂಬಾರಿ, ೨. ಅಂಬಾ, ೩. ಬಾರಿ, ೪. ಅರಿ

ಹಾಸ್ಯ ಚಿಲುಮೆ

ಮೇಷ್ಟ್ರು: "ಯಾವ ದ್ರವ್ಯವು ಕಾಯಿಸಿದಾಗ ಘನ ವಸ್ತು ಆಗುತ್ತದೆ?"

ಗುಂಡ:"ಇಡ್ಲಿ ಹಿಟ್ಟು ಸಾರ್"

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ – ಸುಗಮ ಕನ್ನಡ ಕೂಟ

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಕೆಳಕಂಡ ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

೧. ಲೋಕಮಾತೆಯಾದ ಸೀತೆಗೆ ಆಶ್ರಯ ನೀಡಿದ್ದ ಹುಲ್ಲು ಮತ್ತು ಎಲೆಗಳಿಂದ ನಿರ್ಮಿಸಿದ್ದ ಮನೆ

	■		

೨. ನನ್ನದಲ್ಲ ಎಂದು ಬಿಡುವ 'ಅರ್ಘ್ಯ' ದಲ್ಲಿ ತುಸು ಬದಲಾವಣೆಯಾದರೆ ಹೆಚ್ಚಿನ ಬೆಲೆಯುಳ್ಳದ್ದಾದೀತು.

	■

೩. ಕೋಗಿಲೆ ಹಾಡಲು ಸಾಧುಗಳೊಡನೆ ಬರುವ ಈ ಕಾಲವೇ ಪ್ರಶಸ್ತ.

■	■	

೪.ದೇವರು ನಿಂತಿರುವ ಸ್ಥಳದಲ್ಲೇ ಅಡಗಿಸಿಟ್ಟಿರುವ ಸಂಪತ್ತೂ ಇದೆ.

■		■

೫. ಸನ್ಯಾಸಿಯಾಗಲು ಪಡೆಯಬೇಕಾದದ್ದು?

■	

ಉತ್ತರ: ವ್ಯಾಕರಣ ಪಂಡಿತರ ಮನೆಯಿರುವ ಸಮನಾದ ಬಣ್ಣದ ಉದ್ದನೆಯ ಓಣಿ ಯಾವುದು?

ನಿಮ್ಮ ಉತ್ತರ ಈಮೈಲ್ ಮಾಡಿ, (horanadachilume@gmail.com)

ಅಕ್ಟೋಬರ್ 25 ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ಸೆಪ್ಟೆಂಬರ್ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಸರಿಯಾಗಿ ಉತ್ತರಿಸಿದವರು

- ಸುಮ ಅಶೋಕ್, ಸಿಡ್ನಿ
- ಶಾರದ ಅರವಿಂದ, ಕೆಂಗೇರಿ ಉಪನಗರ

ಸೆಪ್ಟೆಂಬರ್ ತಿಂಗಳ ಪದಪುಂಜದ ಉತ್ತರ

೧. ಸುಖದ ಜೊತೆಗಾರ ಸಕಾರದೊಂದಿಗೆ

ಸ	ಹಿ	ತ

೨. ನಿರ್ದಿಷ್ಟ ಉತ್ತರ ಕೊಡುವುದನ್ನು ಉಪಾಯದಿಂದ ತಪ್ಪಿಸಿಕೊಳ್ಳಲು ದೀಪವನ್ನು ಯಾವುದರ ಮೇಲಿಡಬೇಕು?

ಅ	ಡ್ಡ	ಗೋ	ಡೆ

೩. ಪಂಡಿತರೊಡನೆ ಒಮ್ಮೊಮ್ಮೆ ಬರುವವರು ವೃಕ್ಷದಲ್ಲೇ ಇರಬೇಕು ನೋಡಿ.

ಪಾ	ಮ	ರ

೪. ಭಂಟನು ತನ್ನ ದೇವನೊಡನೆ ಆನಂದದಿಂದ ಒಂದಾಗಿರುವ, ಬೆಂಗಳೂರಿನ ಜನಪ್ರಿಯ ತಾಣ.

ಅ	ನಂ	ದ		ಮಿ	ಲ	ನಾ	ಥ್ರಿ

೫. ಈ ಪವಿತ್ರ ಗ್ರಂಥದ ಉದಯಕ್ಕೆ ಯುದ್ಧಭೂಮಿಯೇ ಬೇಕಾಯಿತೇನು?

ಭ	ಗ	ವ	ದ್		ಗೀ	ತೆ

೬. ತನಗಗತ್ಯವಿರುವುದನ್ನು ತಾನೇ ಪೂರೈಸಿಕೊಳ್ಳುವವ.

ಸ್ವಾ	ವ	ಲಂ	ಬಿ

ಉತ್ತರ: ದನ ಕಾಯುವವನೇ ಒಡೆಯನಾಗಿ ಮಂಜಿನ ಮುಸುಕಿನಲ್ಲಿ ನಿಂತಿದ್ದಾನೆ.

ಹಿ	ಮ	ವ	ದ್		ಗೋ	ಪಾ	ಲ	ಸ್ವಾ	ಮಿ

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮ ಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪

ಮನೆಯಂಗಳದಲ್ಲಿ ಅರಳಿದ ರಂಗೋಲಿ - ರಚನೆ - ದಿವ್ಯಶ್ರೀ ವಿಕ್ರಂ, ಬೆಂಗಳೂರು

NRI SEVA
Educational, Legal, financial, Health, Reality management services Liaison work, Tours & Travels
visit www.nriseva.in or contact
Singapore – Harish +6598691760
Canada – SowmyaKeshava – 00968-99226928
Australia – Nagendra A- 0061401193852
Contact Mr. Nagendra EMAIL 0401193852

ಸಿದ್ನಿ ಕನ್ನಡ ಶಾಲೆ ಅರ್ಪಿಸುತ್ತಿದೆ

ಕನ್ನಡ ಸಾಹಿತ್ಯ ಸಂಗಮ

ಸಾಹಿತಿಗಳು ಹಾಗು ಓದುಗರಿಂದ ಕನ್ನಡ ಸಾಹಿತ್ಯದ ಬಗ್ಗೆ ಚರ್ಚೆ/ವಿಮರ್ಶೆ

ಸ್ಥಳ: Toongabbie East Public School
Harris Rd, Wentworthville NSW 2145
ದಿನಾಂಕ: 07-11-2015 ಸಮಯ: 2-3 pm
ದಸರಾ ಹಬ್ಬದ ಭೋಜನಾನಂತರ

ಪ್ರವೇಶ ಉಚಿತ

18-10-2015 Events Cinemas, Liverpool

Adults $18 Children $12 Book by text msg

Narayana 0423634979 Nagabhushan 0433763911

Or email sugamakannada@yahoo.com.au

SRIVARI ENTERTAINMENTS AUSTRALIA

1st November at 3pm

@EVENTS CINEMAS LIVERPOOL

CHALLENGING STAR

ವಿರಾಟ

ITS A BRAND

A P ARJUN FILM

Booking by TXT msg

Narayana- 0423634979, Nagabhushan - 0433763911

ಅನಿವಾಸಿ ಕಲಾತಂಡ ಅಭಿನಯಿಸುವ

ಬೀಚಿಯವರ ಹಾಸ್ಯ ನಾಟಕ

ಎಕೀಕರಣ

ನಿರ್ದೇಶನ: ವೀಣಾ ಸುದರ್ಶನ್

Toongabbie East Public School
Harris Rd
Wentworthville NSW 2145
3pm on 08-11-2015
Very few onsite and street parking available

ನಟವರ್ಗದಲ್ಲಿ: ಶ್ಯಾಮ್ ಸಿಂಗ್
ಅರ್ಪಣ ನಾಗಶಯನ
ಮಹೇಂದ್ರ ಸಿಂಗ್
ನಾಗಶಯನ ಬೆಳ್ಳಾವೆ
ಕನಕಾಪುರ ನಾರಾಯಣ
ವೀಣಾ ಸುದರ್ಶನ್

ತಾಂತ್ರಿಕ ಸಹಾಯ : ಸುದರ್ಶನ್, ಸಾರಂಗ

ಸಿಡ್ನಿ ಕನ್ನಡ ಶಾಲೆ

ಅರ್ಪಿಸುತ್ತಿದೆ

ನಾಟಕೋತ್ಸವ

ಎರಡು ನಾಟಕಗಳ ಪ್ರದರ್ಶನ

ದಿನ: 08-11-15, ಸಮಯ : 3.00 ಘಂಟೆಗೆ

ಸ್ಥಳ: Toongabbie East Public School
Harris Rd, Wentworthville NSW 2145

ಪ್ರವೇಶ ಒಬ್ಬರಿಗೆ :$10

ಕುಳಿತು ನಾಟಕ ನೋಡುವ ಮಕ್ಕಳಿಗೆ ಉಚಿತ ಪ್ರವೇಶ

Break attraction at 4:30pm

ಪಾನಿ ಪುರಿ,
ಭೇಲ್, ಮಸಾಲೆ,
Many more
CHATS..

ಮನಸ್ಸುಗೆಪ್ಪ ಮುಖಗಳು

ಕೌಟುಂಬಿಕ ನಾಟಕ

ಪಾತ್ರವರ್ಗದಲ್ಲಿ:
ಮಹೇಂದ್ರ ಸಿಂಗ್, ಗೀತ ಹಿರೇಮಠ, ಹರೀಶ್ ಗುರಪ್ಪ, ಮಾನಸ ಬಾಬು,
ಮನೋಹರ್ ರಾಜಶೇಖರ್, ಸುನೀತಾ ಹರೀಶ್, ನಿರ್ಮಲ ಮನೋಹರ್, ಭರತ್
ಸೋಮಶೇಖರ್, ಬಸವರಾಜ್ ಮರಪತಿ, ವೀಣಾ ಸುದರ್ಶನ್

ತಾಂತ್ರಿಕ ಸಹಾಯ: ಸುದರ್ಶನ್, ಸಾರಂಗ

ರಚನೆ:ಪ್ರಕಾಶ್ ಕಂಬತ್ತಳ್ಳಿ

ನಿರ್ದೇಶನ: ವೀಣಾ ಸುದರ್ಶನ್

ಕನ್ನಡದ ಒಂದು ಕಾಯಕಕ್ಕೆ ಕೈ ಜೋಡಿಸಿ

ನೊಂದಾಯಿಸಲು ಮಿಂಚಂಚೆ ವಿಳಾಸ -sugamakannada@gmail.com

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ವಚನ, ಕಗ್ಗ, ಗಮಕ, ಹರಿದಾಸ ಸಾಹಿತ್ಯಗಳು ಕೆಲವು ಪ್ರಮುಖ ಪ್ರಾಕಾರಗಳು. ಇವುಗಳಲ್ಲಿ ಭಗವಂತನ ನಾಮಸ್ಮರಣೆಯಷ್ಟೇ ಅಲ್ಲದೆ, ವಚನಗಳು ತಮ್ಮ ಸರಳ ನುಡಿಯಲ್ಲಿ ಅನುಭವದ ಅರಿವು ನೀಡುವಲ್ಲಿ ನೆರವಾದರೆ, ಹರಿದಾಸ ಸಾಹಿತ್ಯವು ಸಂಗೀತ ಮತ್ತು ಸೊಬಗಿನ ಸಾಹಿತ್ಯದ ಮಿಲನವಾಗಿದೆ. ಕಗ್ಗ, ತ್ರಿಪದಿ,ಷಟ್ಪದಿಗಳು ಅರ್ಥಪೂರ್ಣ ವಿಚಾರಗಳಿಂದ ಕೂಡಿ ಜೀವನದರ್ಶನ ಹಾಗೂ ವಿಚಾರಪೂರ್ಣ ವಿಷಯಗಳಾಗಿ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಜಗತ್ತಿನ ಎಂದಿಗೂ ಝಗಝಗಿಸುವ ಕೊಡುಗೆಗಳಾಗಿವೆ.

ಅಂತರ್ಜಾಲದ ಈ ಮಹಾ ಜಗತ್ತಿನಲ್ಲಿ ಈಗ ಸಾಕಷ್ಟು ಕನ್ನಡಿಗರು ಕರ್ನಾಟಕದಿಂದ ಹೊರಗಿರುವುದು ಎಲ್ಲರಿಗೂ ತಿಳಿದ ವಿಚಾರ. ಅವರೆಲ್ಲರಿಗೂ ಅಲ್ಲದಿದ್ದರೂ ಆಸಕ್ತರಿಗೆ ನೆನೆದಾಗ ಬೆರಳಂಚಿನಲ್ಲೇ ಒಂದೇ ಕಡೆ ಕೈಗೆಟಕುವ ಹಾಗೆ ಮಾಡುವ ನಿಟ್ಟಿನಲ್ಲಿ ನಮ್ಮ ಸುಗಮ ಕನ್ನಡ.ಕಾಂ ಅಂತರ್ಜಾಲ ಕ್ಷೇತ್ರದಲ್ಲಿ ಸುಪ್ರಸಿದ್ಧ ಶರಣರ ವಚನಗಳು, ದಾಸರ ಪದಗಳು, ಕಗ್ಗ, ತ್ರಿಪದಿಗಳು ಹೀಗೆ ಇನ್ನೂ ಅನೇಕ ರಚನೆಗಳನ್ನು ಸಂಗ್ರಹ ಮಾಡುವ ಯೋಜನೆಯನ್ನು ಹಮ್ಮಿಕೊಂಡಿದೆ. ಇದಕ್ಕೆ ತಮ್ಮಗಳ ಸಹಾಯ ಬೇಕಾಗಿದೆ. ತಮಗೆ ಕನ್ನಡ ಬೆರಳಚ್ಚು ಮಾಡಲು ಸಾಧ್ಯವಿದ್ದಲ್ಲಿ, ಈ ಕಲಸ ಆದಂತೇ ಎಂದುಕೊಳ್ಳಿ. ಪ್ರತಿ ವಿಭಾಗದಲ್ಲೂ ಸಾವಿರಕ್ಕೂ ಮೀರುವಂತೆ ಕೃತಿಗಳ ಕಲೆ ಹಾಕುವ ಯೋಚನೆ ಇದೆ. ಈ ಕೆಲಸಕ್ಕೆ ಗರಿಷ್ಟ ಮಿತಿಯಿಲ್ಲದಂತೆ ಹೆಗಲುಕೊಟ್ಟು ನೀವು ಸಹಾಯ ನೀಡಬಹುದು.ನಿಮ್ಮಲ್ಲಿ ಹೆಚ್ಚಿನ ಕನ್ನಡ ಅಭಿಮಾನವಿದ್ದಷ್ಟೂ ಹೆಚ್ಚಿನ ಸಹಾಯ ಸಾಧ್ಯವೆಂಬ ನಂಬಿಕೆ ನಮ್ಮದು. ೩೧ ಆಗಸ್ಟ್ ೨೦೧೫ ರೊಳಗೆ ಈ ಕಾಯಕ ಮುಗಿಸಿ, ಆಸಕ್ತರಿಗೆ ಲಭ್ಯವಾಗಿಸುವ ಆಸೆ ನಮ್ಮದು.

ಸಿಡ್ನಿ ಕನ್ನಡ ಶಾಲೆಯಿಂದ ಈಗಾಗಲೇ ಉತ್ತೀರ್ಣರಾದ ಮಕ್ಕಳೂ, ಸಿಡ್ನಿ ಕನ್ನಡ ಶಾಲೆಯ ಶಿಕ್ಷಕರೂ, ಆಸ್ಟ್ರೇಲಿಯಾದಲ್ಲಿ ಈಗಾಗಲೇ ಕನ್ನಡ ಟೈಪಿಂಗ್ ಮಾಡಲು ಕಲಿತವರೂ,ಪ್ರಪಂಚದ ನಾನಾ ಕಡೆಯಿಂದ ಹೊರನಾಡ ಚೆಲುಮೆಯ ಓದುಗರೂ, ಬರಹಗಾರರೂ ಸಹ ತಮ್ಮ ಕೈ ಜೋಡಿಸಿದ್ದಾರೆ.

ಸಹಾಯ ಹೇಗೆ?

೧.ಮೊದಲು ಆಸಕ್ತರು ಈ-ಮೈಲ್ ಮೂಲಕ ತಮ್ಮ ಹೆಸರು ನೊಂದಾಯಿಸಿಕೊಳ್ಳುವುದು.

೨.ಸುಪ್ರಸಿದ್ಧ ರಚನಕಾರರ ವಚನ, ದಾಸರ ಪದಗಳು, ಕಗ್ಗ, ತ್ರಿಪದಿಗಳು ಇವುಗಳಲ್ಲಿ ಸುಮಾರು ನಾಲ್ಕೈದು ಪುಟಗಳಷ್ಟು ತಮಗೆ ಈ-ಮೈಲ್ ಮೂಲಕ ಕಳುಹಿಸಿಕೊದಲಾಗುವುದು.

೩.ಅದನ್ನು ತಾವು ಬರಹ-ಯೂನಿಕೋಡ್ ಅಥವಾ ಗೂಗಲ್ ಸಹಾಯದಿಂದ ಟೈಪ್ ಮಾಡಿ ನಮಗೆ ಕಳುಹಿಸುವುದು.

೪.ಅವುಗಳನ್ನು ವೆಬ್ ಸೈಟ್ ನಲ್ಲಿ ಪ್ರಕಟಿಸಿದ ನಂತರ ಸಹಾಯ ಮಾಡಿದ ಎಲ್ಲರ ಹೆಸರನ್ನೂ ಶಾಶ್ವತವಾಗಿ ಮುದ್ರಿಸಲಾಗುವುದು. ಅತಿ ಹೆಚ್ಚು ನೆರವು ನೀಡಿದವರಿಗೆ ಕನ್ನಡ ಶಾಲೆಯ ಕಡೆಯಿಂದ ಉಡುಗೊರೆ ಖಚಿತ.

ನೊಂದಾಯಿಸಲು ಮಿಂಚಂಚೆ ವಿಳಾಸ - sugamakannada@gmail.com

ವಿಜ್ಞಾನ

ಕುಣಿಯುವ ನಾಣ್ಯ

ಸಂಕಲನ: ಬದರಿ ತ್ಯಾಮಗೊಂಡ್ಲು

ಬೇಕಾಗುವ ಸಾಮಗ್ರಿ:

- ಒಂದು ಬೌಲ್, ಒಂದು ಗಾಜಿನ ಬಾಟಲ್
- ಫ್ರಿಡ್ಜ್ ನಲ್ಲಿ ಇಟ್ಟು ಚೆನ್ನಾಗಿ ತಣ್ಣಗೆ ಮಾಡಿದ ನೀರು
- ಗಾಜಿನ ಬಾಟಲ್ ಮೂತಿಯನ್ನು ಮುಚ್ಚಬಲ್ಲ ಒಂದು ನಾಣ್ಯ

ವಿಧಾನ:

- ಬೌಲ್ ಗೆ ತಣ್ಣಗಿನ ನೀರನ್ನು ಸುರಿಯಿರಿ.
- ಬಾಟಲ್ ಅನ್ನು ತಲೆಕೆಳಗಾಗುವಂತೆ ಬೌಲ್ ಒಳಗೆ ಇಡಿ (ಬಾಟಲಿನ ತೆರೆದ ಬಾಯಿ ನೀರಿನಲ್ಲಿರಬೇಕು)
- ನಾಣ್ಯವನ್ನು ಕೂಡ ತಣ್ಣಗಿನ ನೀರಿನಲ್ಲಿ ಇಡಿ. ಒಂದೈದರಿಂದ ಹತ್ತು ನಿಮಿಷ ತಣ್ಣಗಿನ ನೀರಿನಲ್ಲಿ ಇರಲಿ
- ನಂತರ ಬಾಟಲ್ ಅನ್ನು ಒಂದು ಮೇಜಿನ ಮೇಲೆ ನಿಲ್ಲಿಸಿ ಅದರ ಬಾಯಿಗೆ ನಾಣ್ಯವನ್ನು ಇಡಿ
- ನಿಮ್ಮ ಅಂಗೈಯನ್ನು ಬಾಟಲ್ ನ ಸುತ್ತಲು ಬರುವಂತೆ ಹಿಡಿದುಕೊಂಡು ಸುಮಾರು ಒಂದು ನಿಮಿಷ ಕಾಯಿರಿ
- ಆಗ ನಾಣ್ಯವು ಕುಣಿಯಲಾರಂಭಿಸುತ್ತದೆ

ಏನಾಗುತ್ತಿದೆ:

ನೀವು ನಿಮ್ಮ ಕೈಯನ್ನು ಬಾಟಲ್ ನ ಸುತ್ತ ಹಿಡಿದಾಗ, ನಿಮ್ಮ ದೇಹದ ಶಾಖವು ಬಾಟಲ್ ಒಳಗಿನ ಗಾಳಿಯನ್ನು ಬೆಚ್ಚಗೆ ಮಾಡುತ್ತದೆ. ಗಾಳಿಯು ಬೆಚ್ಚಗಾದಂತೆ, ಆ ಉಷ್ಣತೆಯಿಂದ ಅದು ಹಿಗ್ಗುತ್ತದೆ (thermal expansion). ಹೀಗೆ ಹಿಗ್ಗಿದ ಗಾಳಿಯು ನಾಣ್ಯವನ್ನು ತಳ್ಳಿ ಹೊರಹೋಗಲು ಪ್ರಯತ್ನಿಸಿದಾಗ ಅದು ಕುಣಿಯುವಂತೆ ಮಾಡುತ್ತದೆ. ▪

ಜಾಣ ಕರ್ನಾಟಕ – ಉತ್ತರ

೧. ಡಾ. ಎಂ.ವಿ. ಗೋಪಾಲಸ್ವಾಮಿ. ಸೆಪ್ಟಂಬರ್ ೧೦, ೧೯೩೫. ೨. ನಾ. ಕಸ್ತೂರಿ.

ಮನಶಾಸ್ತ್ರಜ್ಞರಾಗಿದ್ದ ಡಾ||ಎಂ.ವಿ. ಗೋಪಾಲಸ್ವಾಮಿಯವರು, ಲಂಡನ್ನಿನಿಂದ ತರಿಸಿದ್ದ ೩೦ವ್ಯಾಟ್ ಗಳ ಟ್ರಾನ್ಸ್ ಮಿಟರ್ ಬಳಸಿ, ಮೈಸೂರಿನ ಒಂಟಿಕೊಪ್ಪಲ್ ನಲ್ಲಿದ್ದ ತಮ್ಮ ನಿವಾಸ ವಿಠಲನಿವಾಸ ದಿಂದ ಖಾಸಗಿಯಾಗಿ ರೇಡಿಯೋ ಪ್ರಸಾರವನ್ನು ಆರಂಭಿಸಿದರು. ಪ್ರಥಮವಾಗಿ ಕವಿ ಕುವೆಂಪುರವರ ರಚನೆಗಳನ್ನು ಪ್ರಸಾರಮಾಡಲಾಯಿತು. ಮನೆಯ ಹೊರಗೆ ಧ್ವನಿ ವರ್ಧಕಗಳನ್ನು ಇಟ್ಟು ಶ್ರೋತೃಗಳಿಗೆ ಕಾರ್ಯಕ್ರಮ ಕೇಳಲು ಅವಕಾಶ ಕಲ್ಪಿಸಲಾಗುತ್ತಿತ್ತಂತೆ. ಅಲ್ಲದೆ ಸುಮಾರು ೨೫ ಕಿ.ಮೀ ಸುತ್ತಳತೆಯಲ್ಲಿ ಕಾರ್ಯಕ್ರಮ ಕೇಳಿ ಬರುತ್ತಿತ್ತಂತೆ. ರೇಡಿಯೋ ಕೇಂದ್ರದ ಮುಂದೆ ಸೇರಿದ್ದ ಜನ ತಮಗೆ ಇಷ್ಟವಾದ ಹಾಡುಗಳನ್ನು ಹಾಕಿಸಿಕೊಂಡು ಆನಂದಿಸಬಹುದಿತ್ತು. ಸುಮಾರು ಆರು ವರ್ಷಗಳ ಕಾಲ ಡಾ. ಎಂ.ವಿ.ಗೋಪಾಲಸ್ವಾಮಿಯವರು ಏಕಾಂಗಿಯಾಗಿ ಖಾಸಗಿ ರೇಡಿಯೋ ಪ್ರಸಾರವನ್ನು ನಡೆಸಿದ್ದರು. ನಂತರ ಮಹಾರಾಜ ಚಾಮರಾಜೇಂದ್ರ ಒಡೆಯರ್, ಅದನ್ನು ತಮ್ಮ ಸರ್ಕಾರದಲ್ಲಿ ಸೇರಿಸಿಕೊಂಡರು. ನಂತರ ಪ್ರೊ. ನಾ. ಕಸ್ತೂರಿಯವರು ರೇಡಿಯೋ ಕೇಂದ್ರದ ಕಾರ್ಯನಿರ್ವಾಹಕರಾಗಿದ್ದಾಗ ಆಲ್ ಇಂಡಿಯಾ ರೇಡಿಯೋಗೆ ಆಕಾಶವಾಣಿ ಎಂಬ ಹೆಸರು ಸೂಚಿತವಾಗಿ, ಅಂಗೀಕೃತವಾಯಿತು.

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

ಸಿಡ್ನಿ ಕನ್ನಡ ಶಾಲೆ ಅರ್ಪಿಸುವ

ಕನ್ನಡ ಸಾಹಿತ್ಯ ಸಂಗಮ

ನವೆಂಬರ್ 7 2015 – 2-3 PM

Toongabbie East Public School, Harris Road, Wentworthville

Email: sugamakannada@gmail.com

ಇದು ದಸರಾ ಹಬ್ಬದ ಭೋಜನಾನಂತರದ ಕಾರ್ಯಕ್ರಮ. ಪ್ರವೇಶ ಉಚಿತ

ಸುಗಮ ಕನ್ನಡ ಕೂಟ

ಸಿಡ್ನಿ ದಸರಾ ಉತ್ಸವ

ನವೆಂಬರ್ 7th 2015 ಬೆಳಿಗ್ಗೆ 10:30 ಕ್ಕೆ

Toongabbie East Public School, Harris Road, Wentworthville

ಭಾರತದಿಂದ ವಿಶೇಷ ಆಹ್ವಾನಿತರು ಬರಲಿದ್ದಾರೆ

ಈ ಸಂಚಿಕೆಯನ್ನು ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ

ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ

ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.

ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.